# ಹಾಸನ ಜಿಲ್ಲೆಯ ಪ್ರವಾಸಿ ತಾಣಗಳು

## ಮುನ್ನುಡಿ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ೬-೧೪ ವಯಸ್ಸಿನ ಮಕ್ಕಳು, ನಿರಂತರವಾಗಿ ಶಾಲೆಗೆ ದಾಖಲಾಗಿ ಹಾಜರಾಗಿ, ಗುಣಮಟ್ಟದ ಶಿಕ್ಷಣ ಪಡೆಯುವತ್ತ ದಾಪುಗಾಲು ಹಾಕಿದ್ದಾರೆ. ಸರ್ಕಾರವು ಸರ್ವಶಿಕ್ಷಣ ಅಭಿಯಾನ ಯೋಜನೆಯಡಿ, ಹಿಂದಿನ ವರ್ಷಗಳಲ್ಲಿ ಪ್ರತಿ ಬ್ಲಾಕ್ ನಿಂದ ೫೦ ವಿದ್ಯಾರ್ಥಿಗಳಿಗೆ ಮಾತ್ರ, ಚಿಣ್ಣರ ಕರ್ನಾಟಕ ದರ್ಶನ ಕಾರ್ಯಕ್ರಮದಲ್ಲಿ ಅವಕಾಶವಿತ್ತು. ಪ್ರಸ್ತುತ ಪ್ರತಿ ಬ್ಲಾಕ್ ನಿಂದ ೪೦೦ ವಿದ್ಯಾರ್ಥಿಗಳಿಗೆ ಆಯಾ ಜಿಲ್ಲೆಯ ದರ್ಶನ ಕಾರ್ಯಕ್ರಮ ಏರ್ಪಡಿಸಿರುವುದು ಸಂತಸದ ವಿಷಯವಾಗಿದೆ. ಮಗುವಿಗೆ ಕೇವಲ ಪಠ್ಯ ಪುಸ್ತಕದಲ್ಲಿನ ಪ್ರಾಕೃತಿಕ, ಶೈಕ್ಷಣಿಕ, ಐತಿಹಾಸಿಕ ವಿಷಯಗಳ ಬಗ್ಗೆ ತರಗತಿ ಕೊಠಡಿಯಲ್ಲಿ ಬೋಧಿಸಲಾಗುತ್ತಿದೆ. ಈ ವಿಷಯಗಳ ಕುರಿತು ಖುದ್ದು ಅಧ್ಯಯನಕ್ಕಾಗಿ ಹಾಗೂ ಬುದ್ಧಿ ವಿಕಾಸಕ್ಕಾಗಿ, ಹಾಸನ ಜಿಲ್ಲಾ ದರ್ಶನ ಪ್ರವಾಸದ ಉಪಯೋಗವನ್ನು ಜಿಲ್ಲೆಯ ಪ್ರತಿ ಬ್ಲಾಕ್ ನ ೫, ೬, ೭ನೇ ತರಗತಿಯ ಪ. ಪಂಗಡ, ಪ. ಜಾತಿ ಹಾಗೂ ಪ್ರತಿಭಾನ್ವಿತ ಮಕ್ಕಳಿಗೆ ಅವಕಾಶ ಕಲ್ಪಿಸಿದೆ. ಶಿಕ್ಷಕರು ಮತ್ತು ಮಕ್ಕಳು ಈ ಪ್ರವಾಸದಡಿಯಲ್ಲಿ ಭಿನಾತ್ಮಕ ಮನೋಭಾವನೆ ಮತ್ತು ರಾಷ್ಟ್ರಾಭಿಮಾನ ಬೆಳೆಸಿಕೊಳ್ಳಲೆಂದು ಹಾರೈಸುತ್ತೇವೆ. ಚಿಣ್ಣರ ಹಾಸನ ಜಿಲ್ಲಾ ದರ್ಶನ ಸಾಹಿತ್ಯವನ್ನು ಸಿದ್ಧಪಡಿಲು ಸಹಕರಿಸಿದ ೮ ಬ್ಲಾಕ್ ಗಳ ಎಲ್ಲಾ ಶಿಕ್ಷಣಾಸಕ್ತರು, ಸಂಪನ್ಮೂಲ ವ್ಯಕ್ತಿಗಳಿಗೆ ಹಾಗೂ ಸಹೃದಯರಿಗೆ ನಮ್ಮ ಅಭಿನಂದನೆಗಳು.

**ಶ್ರೀಮತಿ ಗೌಸಿಯ ಬೇಗಂ**
**ಪ್ರಾಂಶುಪಾಲರು**
ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ)
ಡಯಟ್, ಹಾಸನ.

**ಶ್ರೀ ಚಾಮರಾಜ ಎ.ಟಿ.**
**ಉಪನಿರ್ದೇಶಕರು**
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾಸನ.

**ಶ್ರೀ ಎಸ್.ಟಿ. ಅಂಜನ್‌ಕುಮಾರ್** ಕೆ.ಎ.ಎಸ್.
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**
ಜಿಲ್ಲಾ ಪಂಚಾಯತ್,
ಹಾಸನ.

# ಪ್ರವಾಸದ ಪ್ರಾಮುಖ್ಯತೆ :

ಮಾನವ ಸಂಘ ಜೀವಿ ಹಾಗೂ ಸಮಾಜ ಜೀವಿಯಾಗಿದ್ದು ಜೀವನ ಪರ್ಯಂತ ಅನುಭವಗಳ ಮೂಲಕ ಶಿಕ್ಷಣ ಪಡೆಯುತ್ತಿರುತ್ತಾನೆ. ಹಾಗಾಗಿ ಪ್ರವಾಸ ಕಾರ್ಯಕ್ರಮ ಬಹಳ ಪ್ರಾಮುಖ್ಯತೆ ಪಡೆದಿದೆ. ದೇಶಸುತ್ತಿ ಕಲಿ, ಕೋಶ ಓದಿ ಕಲಿ ಎಂಬಂತೆ, ಮಕ್ಕಳು ಪ್ರವಾಸದ ಮೂಲಕ ನೋಡಿ ಕಲಿಯುವ ಅನುಭವ ಕಲಿಕೆಗೆ ಪೂರಕವಾಗಿದೆ.

- ವೈವಿಧ್ಯಮಯ ಜನಜೀವನ, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ಬಗ್ಗೆ ಧನಾತ್ಮಕ ಮನೋಭಾವನೆಗಳ ಬೆಳೆಸುವುದು.
- ವಿವಿಧ ಪ್ರದೇಶಗಳ ಸಂಸ್ಕೃತಿ ಹಾಗೂ ಪರಂಪರೆಗಳ ಪರಿಚಯ ಮಾಡಿಕೊಂಡು ಅವುಗಳನ್ನು ಗೌರವಿಸುವುದು.
- ಸಹಬಾಳ್ವೆ ಹಾಗೂ ಸಹಭಾಗಿತ್ವದ ಮಹತ್ವದೊಂದಿಗೆ ವಾಸ್ತವ ಜೀವನ ಕುರಿತ ಮನೋಭಾವನೆಯಲ್ಲಿ ಬದಲಾವಣೆ ಉಂಟು ಮಾಡುವುದು.
- ಇತರೆ ಧರ್ಮ, ಜಾತಿ ಹಾಗೂ ಪ್ರಾಂತ್ಯದ ಜನರೊಂದಿಗೆ ಸಂವೇದನೆ ಮತ್ತು ಸಹಕಾರ ಮನೋಭಾವನೆ ಬೆಳೆಸುವುದು
- ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗ್ಗೆ ಜ್ಞಾನವನ್ನು ಬೆಳೆಸುವುದು.
- ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.
- ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಸಾಧ್ಯತೆಗಳನ್ನು ಕಡಿಮೆ ಮಾಡುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲಗಳ ಸಂವರ್ಧನೆ ಮಾಡುವುದು.
- ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸುವುದು. ಆತ್ಮವಿಶ್ವಾಸವನ್ನು ಬೆಳೆಸುವುದು.
- ಪಠ್ಯಪುಸ್ತಕದಲ್ಲಿನ ಮಾಹಿತಿ ಹಾಗೂ ಹೊರ ಪ್ರಪಂಚದ ವಾಸ್ತವ್ಯದ ನಡುವೆ ಇರುವ ಅಂತರವನ್ನು ಅರ್ಥೈಸಿ ಕೊಳ್ಳುವಂತೆ ಮಾಡುವುದು.
- ಕಲಿಕೆಯನ್ನು ಶಾಶ್ವತಗೊಳಿಸಲು ಸ್ವತಂತ್ರ ವಾತಾವರಣವನ್ನು ಸೃಷ್ಟಿಸಿ, ಸೃಜನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುವುದು.
- ಮಕ್ಕಳಲ್ಲಿ ಸಮಾಜಸೇವೆ ಭಾವೈಕ್ಯತೆ, ರಾಷ್ಟ್ರ ಪ್ರೇಮ ಮುಂತಾದ ಸದ್ಗುಣಗಳನ್ನು ಬೆಳೆಸುವುದು.

**ಪ್ರವಾಸದ ಸ್ಥಳಗಳ ಆಯ್ಕೆ :**

- ಐತಿಹಾಸಿಕ, ಧಾರ್ಮಿಕ, ಸಾಮಾಜಿಕ, ನೈಸರ್ಗಿಕ, ವೈಜ್ಞಾನಿಕ ಹಾಗೂ ಶೈಕ್ಷಣಿಕ ಮಹತ್ವದ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳು,
- ಮಕ್ಕಳಿಗೆ ಹೊಸ ಅನುಭವವನ್ನು ನೀಡುವ ಜಿಲ್ಲೆಯಲ್ಲಿನ ವಿವಿಧ ಪ್ರದೇಶಗಳ ಪರಿಚಯ.

**ಪ್ರವಾಸದ ಮುಖ್ಯಾಂಶಗಳು :**

- ಎರಡು ದಿನ ಹಾಗೂ ಒಂದು ರಾತ್ರಿಯ ಉಚಿತ ಪ್ರವಾಸ.
- ಉತ್ತಮವಾದ ಊಟ, ಕಾಫಿ, ತಿಂಡಿ, ವಸತಿ ಇತ್ಯಾದಿ.
- ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಉಚಿತ ಪ್ರವೇಶ ವ್ಯವಸ್ಥೆ.
- ಪ್ರತಿ ತಂಡಕ್ಕೆ ಅನುಭವಿ ಮಾರ್ಗದರ್ಶಿ ಶಿಕ್ಷಕ ಮತ್ತು ಶಿಕ್ಷಕಿಯರ ನೇಮಕ.
- ಪ್ರಥಮ ಚಿಕಿತ್ಸೆ ಸೌಲಭ್ಯ.
- ಪ್ರವಾಸದ ಅವಧಿಯಲ್ಲಿ ತಾಲ್ಲೂಕು, ಹೋಬಳಿ ಮತ್ತು ಹಳ್ಳಿಗಳ ಮಾಹಿತಿ ಕೇಂದ್ರಗಳ ಭೇಟಿ.

- ಪ್ರತಿ ತಂಡದ ಮೌಲ್ಯಮಾಪನ ಮತ್ತು ದಾಖಲೀಕರಣ.
- ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ವಿಜೇತ ಮಕ್ಕಳಿಗೆ ಬಹುಮಾನ.

**ಪ್ರವಾಸದ ಅವಧಿಯಲ್ಲಿ ಪಾಲಿಸಬೇಕಾದ ಅಂಶಗಳು :**

- ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸುತ್ತಲಿನ ಪರಿಸರವನ್ನು ವೀಕ್ಷಿಸಬೇಕು.
- ವಿವಿಧ ಸ್ಥಳಗಳಲ್ಲಿ ಜನರ ಭಾಷೆ, ಧರಿಸುವ ಉಡುಪು, ಗುಣ-ನಡತೆ, ಆದರ-ಸತ್ಕಾರಗಳು, ಜೀವನ ಶೈಲಿ, ತಿಂಡಿ-ತಿನಿಸುಗಳಲ್ಲಿ ಇರುವ ವೈವಿಧ್ಯತೆಗಳನ್ನು ಗಮನಿಸಬೇಕು.
- ವೇಳಾಪಟ್ಟಿಯಂತೆ, ವಿದ್ಯಾರ್ಥಿ ಗುಂಪಿನ ನಾಯಕರು, ಪ್ರವಾಸಿ ಮಾರ್ಗದರ್ಶಕರು ಹಾಗೂ ಶಿಕ್ಷಕರು ನೀಡುವ ಸೂಚನೆಯಂತೆ ಸಮಯ ಪಾಲನೆ ಮಾಡಬೇಕು.
- ಬಸ್ಸಿನಿಂದ ಇಳಿದು ಸ್ಥಳಗಳ ವೀಕ್ಷಣೆಗೆ ಸಾಲಾಗಿ ಸಾಗಬೇಕು.
- ಪ್ರತಿ ದಿನದ ದಿನಚರಿಯನ್ನು ಬರೆಯುವುದು.
- ನೀರು ಅಥವಾ ಇಳಿಜಾರು ಸ್ಥಳಕ್ಕೆ ಭೇಟಿ ನೀಡಿದಾಗ ಶಿಕ್ಷಕರು ನೀಡುವ ಸೂಚನೆಗಳನ್ನು ಪಾಲಿಸಿ ಎಚ್ಚರದಿಂದಿರಬೇಕು.
- ನಿಮ್ಮ ನಿಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಎಲ್ಲಾ ಸಮಯದಲ್ಲೂ ಶಿಸ್ತು ಮತ್ತು ಸಭ್ಯತೆಯಿಂದ ನಡೆದುಕೊಳ್ಳಬೇಕು.

**ನೀವು ಹೀಗೆ ಮಾಡದಿರಿ**

- ಬಸ್ಸಿನ ಕಿಟಕಿಗಳಿಂದ ತಲೆ ಅಥವಾ ಕೈಗಳನ್ನು ಹೊರ ಚಾಚಬಾರದು.
- ಬೆಲೆ ಬಾಳುವ ವಸ್ತು/ಆಭರಣಗಳನ್ನು ಕೊಂಡೊಯ್ಯಬಾರದು.
- ಕರಿದ ತಿಂಡಿ ತಿನಿಸುಗಳನ್ನು ತಿನ್ನಬಾರದು.
- ನೀವು ಕೋಪ ಮಾಡಿಕೊಳ್ಳುವುದಾಗಲಿ/ತುಂಟತನವನ್ನಾಗಲಿ ಮಾಡಿಕೊಳ್ಳಬಾರದು.

**ಶಿಕ್ಷಕರಿಗೆ ಮಾರ್ಗಸೂಚಿಗಳು**

- ಪ್ರವಾಸ ಕಾಲದಲ್ಲಿ ಮಗುವಿಗೆ ಕಲಿಯುವ ಅನುಭವಗಳನ್ನು ಹಾಗೂ ವಾತಾವರಣವನ್ನು ಸೃಷ್ಟಿಸಬೇಕು.
- ಪ್ರತಿಯೊಂದು ಮಗುವನ್ನು ಸಮಾನವಾಗಿ ಕಂಡು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು.
- ವಿದ್ಯಾರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿ ತೊಂದರೆಯಾಗದಂತೆ ಶಿಕ್ಷಕರು ಜವಾಬ್ದಾರಿಯನ್ನು ವಹಿಸಬೇಕು.
- ವಿದ್ಯಾರ್ಥಿಗಳು ಬಸ್ಸಿನ ಕಿಟಕಿಗಳಿಂದ ಕೈ ಅಥವಾ ತಲೆಯನ್ನು ಹೊರಚಾಚದಂತೆ ಎಚ್ಚರಿಕೆ ವಹಿಸಬೇಕು.
- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ ಹೆಣ್ಣು ಮಕ್ಕಳ ಗುಂಪಿನ ಜವಾಬ್ದಾರಿಯನ್ನು ಶಿಕ್ಷಕಿಯರು ವಹಿಸಬೇಕು.
- ಶುದ್ಧ ಕುಡಿಯುವ ನೀರು ಹಾಗೂ ಶುದ್ಧ ಆಹಾರವನ್ನು ಒದಗಿಸಬೇಕು
- ನೀರು ಅಥವಾ ಇಳಿಜಾರು ಸ್ಥಳಗಳಲ್ಲಿ ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಮುಂಜಾನೆ ಸಾಮೂಹಿಕ ಪ್ರಾರ್ಥನೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.
- ಪ್ರತಿದಿನದ ದಿನಚರಿಯನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ನಿರ್ವಹಿಸಬೇಕು.
- ವಿದ್ಯಾರ್ಥಿಗಳ ಹಾಜರಾತಿ ಮತ್ತು ಶಿಕ್ಷಕರ ವಿವರಗಳನ್ನು ಒಳಗೊಂಡಿರುವ ದಾಖಲೆಗಳನ್ನು ನಿರ್ವಹಿಸುವುದು.

- ಯಾವುದೇ ಮಗು ಗುಂಪುನ್ನು ಬಿಟ್ಟು ಹೋಗದಂತೆ ನಿಗಾವಹಿಸಬೇಕು ಮತ್ತು ಸೂಚನೆಯನ್ನು ನೀಡಬೇಕು.**ಶಿಕ್ಷಕರೆ ಹೀಗೆ ಮಾಡದಿರಿ !**
- ಶಿಕ್ಷಕರ ನಡುವೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡಬಾರದು.
- ಬಸ್ಸಿನಲ್ಲಿ ಎಲ್ಲಾ ಶಿಕ್ಷಕರು ಒಂದೇ ಕಡೆ ಕುಳಿತುಕೊಳ್ಳಬಾರದು.
- ಅನಾರೋಗ್ಯದಿಂದ ಬಳಲುವ ಮಗುವನ್ನು ಒಂಟಿಯಾಗಿ ಬಿಡಬಾರದು.

## ಆಲೂರು ತಾಲ್ಲೂಕಿನ ಪ್ರಮುಖ ಸ್ಥಳಗಳು

**ಪಾಳ್ಯ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೨೨ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೧೫ ಕಿ.ಮೀ



ತಾಲ್ಲೂಕು ಕೇಂದ್ರ ಆಲೂರಿನಿಂದ ಪಶ್ಚಿಮಕ್ಕೆ ಬೆಂಗಳೂರು ಮಂಗಳೂರು ರಾಷ್ಟ್ರೀಯ ಹೆದ್ದಾರಿ ಸಮೀಪ ೧೫ಕಿ.ಮೀ ಅಂತರದಲ್ಲಿರುವ ಹೋಬಳಿ ಕೇಂದ್ರ ಪಾಳ್ಯ. ಇಲ್ಲಿ ಲಕ್ಷ್ಮಿ ಜನಾರ್ಧನ, ರಾಮೇಶ್ವರ ೪ ತ್ರಿಪುರಾಂತಕೇಶ್ವರ ದೇವಾಲಯಗಳು ಇವೆ. ಲಕ್ಷ್ಮೀ ಜನಾರ್ಧನ ದೇವಾಲಯವನ್ನು ಸುಮಾರು ಹದಿನಾಲ್ಕನೇ ಶತಮಾನದ ಪ್ರಾರಂಭದಲ್ಲಿ ಕಟ್ಟಿಸಿರಬಹುದೆಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಪಾಳೆಗಾರರು ಇಲ್ಲಿ ಆಳ್ವಿಕೆ ನಡೆಸಿರುವರೆಂಬುದಕ್ಕೆ ಇಲ್ಲಿ ದೊರೆತ ಪಳೆಯುಳಿಕೆಗಳು ಸಾಕ್ಷಿಯಾಗಿವೆ.

ಪುರಾತನ ಪುರಾಣ ಪ್ರಸಿದ್ಧಿ ಪಡೆದ ಆಗಿನ ಪೂರ್ವದಲ್ಲಿನ 'ಪದ್ಮಾವತಿ' ಪುರ ಎಂಬ ಪಟ್ಟಣದಲ್ಲಿ 'ವಿತಂಕ' ನೆಂಬ ರಾಕ್ಷಸನು ಸೈನ್ಯ ಸಮೇತ ವಾಸವಾಗಿದ್ದನು. ಇವನು ಮುಂದೆ ರಾಮನಾಥಪುರದಲ್ಲಿ ದೇವರನ್ನು ಕುರಿತು ಘನ ಘೋರವಾದ ತಪಸ್ಸನ್ನು ಮಾಡುವಾಗ ಅವನ ತಲೆಯಲ್ಲಿ ಹೊಗೆ ಬರಲು ಪ್ರಾರಂಭವಾದಾಗ ರಾಮೇಶ್ವರ ದೇವರು ಪ್ರತ್ಯಕ್ಷನಾಗಿ ಏನು ವರಬೇಕೆಂದು, ಕೇಳು ಎಂದಾಗ, 'ವಿತಂಕ'ನು ಎಲ್ಲರಿಗಿಂತಲೂ ಉನ್ನತ ಮಟ್ಟದವನಾಗಬೇಕೆಂದು ಕೇಳಿದನು.

ಪಾಳ್ಯ ಭಕ್ತನ ಕೋರಿಕೆ ಈಡೇರಿಸುವ ಸಲುವಾಗಿ ಹಾಗೇ ಆಗಲೆಂದು ದೇವರು ಅನುಗ್ರಹ ನೀಡಿದನು. ಆ ವರದ ಬಲದಿಂದ ಗರ್ವಿತವಾದ ರಾಕ್ಷಸನು ಸೈನ್ಯ ಸಮೇತ ಮಹಾವಿಷ್ಣುವಿನ ಮೇಲೆ ಯುದ್ಧಕ್ಕೆ ಹೊರಡಲು ಸಿದ್ದನಾದನು.

ಯುದ್ಧದಲ್ಲಿ ಮಹಾವಿಷ್ಣುವು ತನ್ನ ಸುದರ್ಶನ ಚಕ್ರದ ಸಹಾಯದಿಂದ "ವಿತಂಕ" ರಾಕ್ಷಸನನ್ನು ಸಂಹಾರ ಮಾಡಿ ಪಾಳ್ಯದಲ್ಲಿ ಅರ್ಚನಾ ರೂಪವನ್ನು ಸ್ವೀಕರಿಸಿದನು, ಹಾಗೂ ಇಂದ್ರನಿಗೆ ಬಂದ ಬ್ರಹ್ಮಾಹತ್ಯಾ ದೋಷವನ್ನು ಹೋಗಲಾಡಿಸಿಕೊಳ್ಳಲು ಇಲ್ಲಿ ಬಂದು ಶ್ರೀ ಜನಾರ್ಧನನ್ನು ಪೂಜಿಸಲಾಯಿತು. ಆದ್ದರಿಂದ ಇದಕ್ಕೆ 'ಇಂದ್ರಪ್ರಸ್ತಪುರಿ' ಎಂಬ ಹೆಸರು ಬಂದಿತು.

ಸಂತಾನವಿಲ್ಲದವರು ಇಲ್ಲಿನ ಸನ್ನಿದಿಯಾದ ಶ್ರೀ ಲಕ್ಷ್ಮೀ ಜನಾರ್ಧನ ಸ್ವಾಮಿಯ ಸೇವೆ ಮಾಡಿದರೆ, ಮಕ್ಕಳಾಗುತ್ತವೆಂದು ಪುರಾಣ ಪ್ರಸಿದ್ಧಿ ಪಡೆದಿದೆ.

ಪ್ರವರ್ಷ ಪಾಲ್ಗುಣ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಊರಿನ ಮುಂಭಾಗದ ಸ್ವಲ್ಪ ದೂರದಲ್ಲಿ ಶಂಕರತೀರ್ಥ ಮತ್ತು ಚಕ್ರತೀರ್ಥ ಎಂಬ ಎರಡು ಹಳ್ಳಗಳು ಕೂಡಿ 'ಪದ್ಮಾವತಿ' ಎಂಬ ಹೆಸರಿನ ಹೊಳೆ ಹರಿಯುತ್ತದೆ. ದಂತಕತೆಗಳ ಪ್ರಕಾರ ಜಮದಗ್ನಿ ಋಷಿಯ ಆಶ್ರಮ ಈ ಊರಲ್ಲಿ ಇತ್ತೆಂದು ಹೇಳುತ್ತಾರೆ. ಈ ಪ್ರಾಂತ್ಯವನ್ನು ಹಿಂದೆ ಆಳುತ್ತಿದ್ದ ಪಾಳೆಗಾರ ಈ ಊರಲ್ಲಿ ನಿಕ್ಷೇಪ ದ್ರವ್ಯವನ್ನು ಇಟ್ಟು ಇದರ ಸುತ್ತಲೂ ಕೋಟೆ ಕಟ್ಟಿದ್ದಾನೆಂಬ ಪ್ರತೀತಿಯಿದೆ.

**ಮರಸು :-**

ಆಲೂರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ "ಮರಸು" ತಾಲೂಕು ಕೇಂದ್ರ ಆಲೂರಿನಿಂದ ಸುಮಾರು ೧.೫ಕಿ.ಮೀ ದೂರದಲ್ಲಿದೆ. ಮರಸು ಗ್ರಾಮದಲ್ಲಿ ಈಶ್ವರ, ಗಣಪತಿ, ದೇವಸ್ಥಾನಗಳು, ವಿಶೇಷವಾದ ಒಂದು 'ಗರುಡ'ಗಂಬ ಇದೆ. ಈ ರೀತಿಯ ಗರುಡಗಂಬ ಕಾಶಿಯಲ್ಲಿ ಬಿಟ್ಟರೆ, ಭಾರತದಲ್ಲಿ ಎರಡನೆಯ ಕಂಬ ಇದಾಗಿದೆ.

ಈಶ್ವರ ದೇವಸ್ಥಾನದ ಒಳಗಡೆ ಕಲ್ಲಿನ ಮೇಲೆ ಹಳಗನ್ನಡದ ಶಾಸನಗಳು ಬರೆಯಲ್ಪಟ್ಟಿವೆ. ಸುತ್ತ ಮುತ್ತಲ ಪರಿಸರ ರಮಣೀಯವಾಗಿದೆ. ಈ ಊರು ಹಿಂದೆ ಪಾಳೆಗಾರರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದಕ್ಕೆ ಇಲ್ಲಿನ ಪಳೆಯುಳಿಕೆಗಳು ಸಾಕ್ಷಿಯಾಗಿವೆ. ಊರಿನ ಮುಂಭಾಗದಲ್ಲಿ ಕೋಟೆಯ ದಿಟ್ಟಿ ಬಾಗಿಲು ಈಗಲೂ ಇದೆ.

**ವಾಟೆಹೊಳೆ :-**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೪ ಕಿ.ಮಿ



ಆಲೂರು ತಾಲ್ಲೂಕಿನ ಸೌಂದರ್ಯ ತುಸು ಹೆಚ್ಚಿಸಿದ ಕೀರ್ತಿ 'ವಾಟೆಹೊಳೆ' ಯಾಗಿದೆ. ಅಲ್ಲದೇ ವಾಟೆಹೊಳೆ ತಾಲ್ಲೂಕಿನಲ್ಲಿ ಏಕೈಕ ಡ್ಯಾಂ ಆಗಿದೆ.

ಇದು ಮೂಲತಃ ಬೇಲೂರು ತಾಲ್ಲೂಕಿನ ನಾಗೇನಹಳ್ಳಿ ಬಳಿ ಹುಟ್ಟಿ ಬೇಲೂರು ತಾಲ್ಲೂಕಿನ ಗಡಿ ಹೊಂದಿಕೊಂಡಂತೆ ಎತ್ತರ ಭಾಗದಲ್ಲಿ ಹರಿದು ಬರುತ್ತವೆ. ಆಲೂರು ತಾಲ್ಲೂಕಿನ ವಾಟೆಹೊಳೆ ಎಂಬಲ್ಲಿ ಇದಕ್ಕೆ ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಎಡದಂಡೆ & ಬಲದಂಡೆ ಕಾಲುವೆಗಳು ತಾಲ್ಲೂಕಿಗೆ ರೈತರಿಗೆ ವರದಾನವಾಗಿದೆ.

ಆಲೂರುನಿಂದ ಸುಮಾರು ೧೪ಕಿ.ಮೀ ದೂರದಲ್ಲಿರುವ ವಾಟೆಹೊಳೆ ಜಲಾಶಯ ಸುಂದರ ಪ್ರಕೃತಿಯ ಮಡಿಲಲ್ಲಿ ರಮಣೀಯತೆ ಮೆರೆದಿದೆ. ಮುಂದೆ ಈ ನದಿಯು ಜನ್ನಾಪುರ ಬಳಿ ಯಗಚಿ ನದಿ ಸೇರುತ್ತದೆ. ಇಲ್ಲಿನ ಬಲದಂಡೆ ಕಾಲುವೆ ತಾಳೂರು ಮಾರ್ಗವಾಗಿ ಸಾಗಿ ಸುಮಾರು ೪೦ ಕಿ.ಮೀ ದೂರದುದ್ದಕ್ಕೂ ಸಾಗಿ ಚನ್ನಾಪುರ ಬಳಿ ಹೇಮಾವತಿ ಸೇರುತ್ತದೆ

**ಮಹಾರಾಜನ ದುರ್ಗ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೫ ಕಿ.ಮೀ



ತಾಲ್ಲೂಕು ಕೇಂದ್ರವಾದ ಆಲೂರಿನಿಂದ ಸುಮಾರು ೨೫ ಕಿ.ಮೀ ದೂರದ ಮಗ್ಗೆ ಸಮೀಪ ಕಾಫಿ ತೋಟಗಳು ಕಾಡು-ಮೇಡುಗಳ ಮಧ್ಯೆ ಸುಮಾರು ಎರಡು ಕಿ.ಮೀ ಮುಂದೆ ಹೋದರೆ ಏಕಶಿಲಾ ಬೆಟ್ಟದ ದರ್ಶನವಾಗುತ್ತದೆ.

ನಯನ ಮನೋಹರವಾಗಿ ಪರಿಮಳಿಸುವ ಕಾಫಿ ತೋಟಗಳು, ಭತ್ತದ ಗದ್ದೆಗಳು, ಹರ್ಷೋಲ್ಲಾಸ ನೀಡುವ ಸುಂದರ ಸೃಷ್ಟಿಯ ಅಂದಕ್ಕೆ ಮೆರಗು ನೀಡಿ ಚೆಲುವ ದ್ವಿಗುಣಗೊಳಿಸಿ ಅಲ್ಲಲ್ಲಿ ಕಲರವಿಸುವ ಕಿರುತೊರೆಗಳು ದೃಷ್ಟಿಯ ಎಲ್ಲೆಗೆ ಸಿಗುತ್ತವೆ. ಸುತ್ತಲಿನ ಬೆಟ್ಟಗಳು ಚೆಲುವಾದ ರಮಣೀಯ ಮೆಟ್ಟಿಲುಗಳೊಂದಿಗೆ ಹಚ್ಚ ಹಸುರಿನ ಸೆರಗೊದ್ದ ಗುಡ್ಡವೇ ಪಾರ್ವತಮ್ಮನ ಗುಡ್ಡವಾಗಿದೆ.

ಗುಡ್ಡದ ಮೇಲೇರಿದರೆ ಪೂರ್ವಕ್ಕೆ ಮಲೆನಾಡಿ ನಂಚಿನಲ್ಲಿ ಅಕರ್ಷಕಕೃತಿಯ ಕಡಿದಾದ ಏಕಶಿಲಾ ಬೆಟ್ಟವಾದ ಮಹಾರಾಜನ ದುರ್ಗ, ಪಶ್ಚಿಮಕ್ಕೆ ಪಶ್ಚಿಮ ಘಟ್ಟಗಳ ಶ್ರೇಣಿ, ಅಕ್ಕ-ಪಕ್ಕದಲ್ಲಿ ಕಾಫಿ ತೋಟಗಳು, ಬೆಟ್ಟದ ಬುಡದಲ್ಲಿ ದಟ್ಟವಾದ ಕಾಡಿದೆ. ಈ ಕಾಡಿನ ಪೊದೆಗಳಲ್ಲಿ ಅಥವಾ ದಿಮ್ಮಿಗಳಂತಹ ಪೊಟರೆಗಳಲ್ಲಿ ಕಾಡು ಹಂದಿ, ನವಿಲು, ಕರಡಿ ಮುಂತಾದ ಪ್ರಾಣಿಗಳು ವಾಸವಾಗಿವೆ.

ಅಲ್ಲಿಂದ ಮುಂದೆ ಬೆಟ್ಟದ ಮೇಲೆ ಈಶ್ವರ -ಪಾರ್ವತಿಯರ ದೇವಸ್ಥಾನವಿದೆ. ಇಲ್ಲಿರುವ ಪಾರ್ವತಮ್ಮನ ವಿಗ್ರಹ ಸುಮಾರು ಆರು ಅಡಿ ಎತ್ತರವಿದ್ದು ನೋಡಲು ಸುಂದರವಾಗಿದೆ. ಈ ದೇವಸ್ಥಾನ ಎದುರಿಗೆ ಮಹಾರಾಜ ದುರ್ಗವಿದೆ. ಸ್ಥಳೀಯ ದಂತಕತೆಗಳ ಪ್ರಕಾರ ಮಹಾರಾಜನ ದುರ್ಗ ಪ್ರದೇಶವನ್ನು ಆಳುತ್ತಿದ್ದ ರಾಜ ಬೆಟ್ಟದ ಮೇಲೆ ಇದ್ದ ತನ್ನ ಅರಮನೆಯಿಂದಲೇ ದೇವಿಯ ದರ್ಶನ ಪಡೆಯುತ್ತಿದ್ದಾನೆಂದು ಪ್ರತೀತಿಯಿದೆ.

ಬೆಟ್ಟದ ಕೆಳಗೆ ಮೂರು ಚಿಕ್ಕ ಚಿಕ್ಕ ಬಾವಿಗಳಿವೆ. ಶಿರವಿಲ್ಲದ ಬಸವಣ್ಣನ ವಿಗ್ರಹ, ಒಂದೇ ಬಂಡೆಯಲ್ಲಿ ವೀರಭದ್ರೇಶ್ವರ, ಸಿದ್ದೇಶ್ವರ ದೇವಾಲಯಗಳ ಜೊತೆಗೆ ಚಿಕ್ಕ, ಚಿಕ್ಕ ಬಾಗಿಲುಗಳುಳ್ಳ ಮೂರು ಆಶ್ರಮಗಳ ಅವಶೇಷಗಳು ಕಂಡುಬರುತ್ತವೆ. ಸುರಂಗಮಾರ್ಗ, ಮುನಿಗಳು ಯಾಗ ಮಾಡಿದರೆನ್ನಲಾದ ಗುಂಡಿಗಳು, ಮಂಟಪಗಳ ಅವಶೇಷಗಳು ಕಂಡುಬರುತ್ತವೆ.

ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಬಾರದೆ ಇದ್ದಾಗ, ಒಮ್ಮನಸ್ಸಿನಲ್ಲಿ ಭಯ-ಭಕ್ತಿಯಿಂದ ಪಾರ್ವತಿ ಹಾಗೂ ಈಶ್ವರ ಮೂರ್ತಿಗಳಿಗೆ ಅಭಿಷೇಕ ಮಾಡಿಸಿದರೆ ಮಳೆ ಬಂದೇ ಬರುತ್ತದೆ. ಎಂಬುದು ಇಂದಿಗೂ ಸ್ಥಳೀಯರ ಬಲವಾದ ನಂಬಿಕೆಯಿದೆ.

**‘ಕೆಂಚಮ್ಮನ ಹೊಸಕೋಟೆ’**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೭ ಕಿ.ಮೀ



ಆಲೂರಿನಿಂದ ಸುಮಾರು ೨೭ ಕಿ.ಮೀ. ದೂರದಲ್ಲಿ ಬಾಳ್ಳುಪೇಟೆ ಸೋಮವಾರಪೇಟೆ ರಸ್ತೆಯಂಚಿನಲ್ಲಿರುವ ಹೋಬಳಿ ಕೇಂದ್ರ ಸ್ಥಾನವಾಗಿದ್ದು ಊರಿನ ಸುತ್ತಮುತ್ತಲಿನ ಪರಿಸರ ಕಾಫಿ, ಏಲಕ್ಕಿ ತೋಟಗಳಿಂದ ಘಮ ಘಮಿಸುತ್ತಾ ನೋಡುಗರ ನೇತ್ರಗಳಿಗೆ ರಮಣೀಯತೆಯನ್ನು ಉಣಬಡಿಸುತ್ತದೆ.

ಇಲ್ಲಿಂದ ೨ ಕಿ.ಮೀ. ದೂರದಲ್ಲಿ ಕೆಂಚಾಂಬಿಕಾ ದೇವಿಯ ದೇವಾಲಯವಿದೆ. ವರ್ಷದಲ್ಲಿ ಎರಡು ಭಾರಿ ಸುತ್ತಮುತ್ತಲಿನ ೪೮ ಹಳ್ಳಿಯ ಜನರು ಒಟ್ಟಿಗೆ ಸೇರಿ ವಿಜೃಂಭಣೆಯಿಂದ ಜಾತ್ರೆ ನಡೆಸುತ್ತಾರೆ. ಸ್ಥಳೀಯ ದಂತಕತೆಯ ಪ್ರಕಾರ ಕೆಂಚಾಂಬ ದೇವಿ ಸಪ್ತಮಾತೃಕೆಯಲ್ಲಿ ಒಬ್ಬಳೆಂದು ಹಾಗೂ ಹಾಸನದಲ್ಲಿ ಇರುವ ಹಾಸನಾಂಬೆಯ ಸಹೋದರಿ ಎಂದೂ ತಿಳಿದು ಬರುತ್ತದೆ. ರಕ್ತ ಬೀಜಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡುವಾಗ ದುರ್ಗಾ ದೇವತೆಗೆ ಸಹಾಯಕಳಾದಳೆಂದು ತಿಳಿದು ಬರುತ್ತದೆ.

ಕೆಂಚಾಂಬ ದೇವಿಯ ದೇವಸ್ಥಾನದ ಮೂರು ದಿಕ್ಕುಗಳಲ್ಲಿ ತ್ರಿಮೂರ್ತಿಗಳ ದೇವಸ್ಥಾನಗಳಿರುವುದೊಂದು ವಿಶೇಷ ಪೂರ್ವಕ್ಕೆ ಅರ್ಧ ಕಿ.ಮೀ. ದೂರದಲ್ಲಿ ಈಶ್ವರನ ದೇವಸ್ಥಾನ, ಪಶ್ಚಿಮಕ್ಕೆ ಸಿಂಧು ಬ್ರಹ್ಮನ ದೇವಾಲಯ, ದಕ್ಷಿಣಕ್ಕೆ ಶ್ರೀ ಕೃಷ್ಣ ದೇವಾಲಯಗಳು ಇವೆ.

ಇಲ್ಲಿ ಕೋಟೆಯೊಂದಿದ್ದು ಇದರೊಳಗೆ ನೀರಿನ ಕೊಳ, ವಿಭಿನ್ನ ರೀತಿಯ ಕೆತ್ತನೆ ವಿನ್ಯಾಸಗಳುಳ್ಳ ಆಂಜನೇಯ ದೇವಸ್ಥಾನ, ಗರುಡಗಂಬ, ಈಶ್ವರಲಿಂಗ, ನವಗ್ರಹ ವಿಗ್ರಹ, ಬಸವೇಶ್ವರ ದೇವಾಲಯಗಳಿವೆ. ಬೇಲೂರು ತಾಲ್ಲೂಕಿನ ಪ್ರಮುಖ ಸ್ಥಳಗಳು

## ಅರಸೀಕೆರೆ ತಾಲ್ಲೂಕಿನ ಪ್ರಮುಖ ಸ್ಥಳಗಳು

**ಜೇನುಕಲ್ ಸಿದ್ದೇಶ್ವರ ಸ್ವಾಮಿ ಕ್ಷೇತ್ರ :- ಯಾದಾಪುರ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೫ ಕಿ.ಮೀ




ಅರಸೀಕೆರೆ ಯಿಂದ ಸುಮಾರು ೫ ಕಿ.ಮೀ ದೂರವಿರುವ ಯಾದಾಪುರ ಗ್ರಾಮದಲ್ಲಿರುವ ಶ್ರೀ ಜೇನುಕಲ್ ಸಿದ್ದೇಶ್ವರ ಸ್ವಾಮಿಯ ಪುಣ್ಯಕ್ಷೇತ್ರವಿದೆ. ಇಲ್ಲಿ ಇನ್ನೂರಕ್ಕೂ ಹೆಚ್ಚು ಜೇನುಗೂಡುಗಳಿವೆ. ಈ ಬೆಟ್ಟಕ್ಕೆ ಹತ್ತಲು, ಉತ್ತರ ದಕ್ಷಿಣವಾಗಿ ಎರಡೂ ಕಡೆಯಿಂದಲೂ ಮೆಟ್ಟಿಲುಗಳಿವೆ. ಹಾಗೂ ೧೨೦೦ ಮೆಟ್ಟಿಲುಗಳಿದ್ದು, ಪ್ರತಿ ಹುಣಿಮೆಯಲ್ಲಿ ಜಾತ್ರೆಯ ವಾತಾವರಣವನ್ನು ನೋಡಬಹುದು. ಎಲ್ಲ ಭಕ್ತಾಧಿಗಳಿಗೆ, ದಾಸೋಹವಿರುತ್ತದೆ.

ಬೆಟ್ಟದ ಮೇಲೆ ಬರಿ ಪಾದಗಳಿವೆ ಅಲ್ಲಿ ತುಂಬೆ ಹೂವುಗಳಿಂದ ಪೂಜಿಸುತ್ತಾರೆ. ಹಾಗೂ ಕೈ ಅಪ್ಪಣೆ ಕೇಳುವ ವಾಡಿಕೆಯಿದೆ. ಜೇನುನೊಣಗಳ ಕಥೆ ಹಾಗೂ ಉಪಕಥೆಗಳಿಂದ ಕೂಡಿದೆ.

**ಅರಸೀಕೆರೆಯಲ್ಲೂ ಹೊಯ್ಸಳ ವೈಭವ :- ಈಶ್ವರ ದೇವಾಲಯ ಶಿವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೧ ಕಿ.ಮೀ



ಇದು ಅರಸೀಕೆರೆಯಿಂದ ಹುಳಿಯೂರು ರಸ್ತೆಯಲ್ಲಿರುವ ಶಿವಾಲಯ, ಹೊಯ್ಸಳ ಕಾಲ-(೧೦೯೮-೧೧೦೦) ವಿಷ್ಣುವರ್ಧನನ ತಂದೆ ಎರೆಯಂಗನ ಆಳ್ವಿಕೆ ಕಾಲ. ಇಲ್ಲಿ ಹಾರ್ನಹಳ್ಳಿಯಿಂದ ಬಾಣವಾರದ ತನಕ ಆಳ್ವಿಕೆ ಇತ್ತು. ಮುಂದೆ ಇಮ್ಮಡಿ ಬಲ್ಲಾಳನ (೧೧೭೩-೧೨೨೦) ಕಾಲದಲ್ಲಿ ಅರಸೀಕೆರೆ ತುಂಬ ಅಭ್ಯುದಯ ಹೊಂದಿತು. ಹೊಯ್ಸಳ ಸಾಮ್ರಾಜ್ಯದ ಹೆಸರಾಂತ ಕಲಾಕೃತಿಗಳನ್ನು ಒಳಗೊಂಡಿರುವ ಶಿವಾಲಯ. ಇದು ನಕ್ಷತ್ರ ಆಕಾರದಲ್ಲಿರುವ ತಳಮಟ್ಟದಲ್ಲಿ ಮೂರು ಅಡಿ ಎತ್ತರದವರೆಗೆ ಆನೆ, ಕುದುರೆ, ಯಕ್ಷ ಹಂಸ, ಗೋಪುರಗಳ ಕಳಸವಿದೆ. ಸೂಕ್ಷ್ಮ ಕಸುರಿ ಕೆತ್ತನೆಗಳಿದ್ದು, ಕಣ್ಮನ ಸೆಳೆಯುತ್ತದೆ. ೧೮೯೦ರಲ್ಲಿ ಮೈಸೂರು ಅರಸರಿಗೆ ಸೇರಿತು. ನವರಂಗ, ಸುಕನಾಸಿ, ಅಂತರಾಳ, ನಕನಾಸಿ, ಗರ್ಭಗುಡಿ, ನಾಟ್ಯರಂಗ, ಪ್ರಾರಂಭದ್ವಾರ, ಅಂತರಾಳದರ್ಶನ ಮಂಟಪ ನಂದಿ ಪ್ರತಿಷ್ಠಾಪನೆ ಮಾಡಲಾಗಿದೆ. ಗರ್ಭಗುಡಿಯಲ್ಲಿ ಶಿವಲಿಂಗ ಸ್ಥಾಪನೆ, ೪೬ ಕಂಬ ವಿಭಿನ್ನ ರೀತಿಯಿಂದ ಕೆತ್ತಲಾಗಿದೆ. ನವರಂಗದಲ್ಲಿ ಕೆಳಭಾಗದಲ್ಲಿ ಆನೆಗಳ ಸಾಲು ಮೇಲ್ಭಾವಣಿಯಲ್ಲಿ ಕೂರಲಿಕ್ಕೆ ಕಲ್ಲಿನ ಆಸನ ಮಾಡಲಾಗಿದೆ. ಗರ್ಭಗುಡಿಯಲ್ಲಿ ಆಕರ್ಷಕ ಶಿವಲಿಂಗವಿದೆ. ಇದು ಚಂದ್ರ ಮೌಳೇಶ್ವರ ಎಂದು ಪ್ರಸಿದ್ಧಿ ಪಡೆದಿದೆ.

**ಮಾಡಾಳು ಗೌರಮ್ಮ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೧ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೬ ಕಿ.ಮೀ




ಅರಸೀಕೆರೆ ತಾಲ್ಲೂಕು ದೊಡ್ಡ ಮೇಟಿ ಕುರ್ಕೆ ಗ್ರಾಮದ ಮುಂದೆ ಬರುವ ಗ್ರಾಮವೇ ಮಾಡಾಳು ಗ್ರಾಮ. ಈ ಗ್ರಾಮದಲ್ಲಿ ಬರುವ ಬಸವಕುಮಾರ ಆಶ್ರಮ ಎಂಬ ಮಠವಿದೆ. ಶ್ರಾವಣ ಮಾಸ ಮುಗಿದ ಕೂಡಲೇ ಬರುವುದು ಸ್ವರ್ಣ ಗೌರಿವ್ರತ ಈ ವ್ರತವನ್ನು ಆರಾಧಿಸುವವರು ಶ್ರೀ ಗೌರಮ್ಮನನ್ನು ಮಣ್ಣಿನಿಂದ, ಬೆಳ್ಳಿಯಿಂದ ಮಾಡಿದ, ಮೂರ್ತಿಯನ್ನು ಪೂಜಿಸುವುದು. ಸಂಪ್ರಾದಾಯ. ಇಲ್ಲಿಯ ವಿಶೇಷ ಅರಿಶಿನದಿಂದ ಮಾಡಿ ಅದಕ್ಕೆ ವಜ್ರದ ಮೂಗುತಿಯನ್ನು ಅಂದೇ ಮೂಗಿಗೆ ಹಾಕುತ್ತಾರೆ. ಆಗ ಆ ದೇವರಲ್ಲಿ ಒಂದು ಶಕ್ತಿ ಬರುತ್ತದೆ.

ಸ್ಥಾಪಿಸಿದ ೯ನೇ ದಿನಕ್ಕೆ ವಿಸರ್ಜನ ಮಹೋತ್ಸವವಿರುತ್ತದೆ. ಈ ದೇವಿಗೆ ಕರ್ಪೂರದಲ್ಲಿ ಪೂಜೆ ಮಾಡುತ್ತಾರೆ. ಕರ್ನಾಟಕ ರಾಜ್ಯದ ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ ಮಾಡಾಳು ಗ್ರಾಮ ಸುಪ್ರಸಿದ್ಧವಾಗಿದೆ.

**ಮಾಲೆಕಲ್ಲು (ಅಮರಗಿರಿ) ತಿರುಪತಿ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೨ ಕಿ.ಮೀ




ಮಾಲೆಕಲ್ಲು ತಿರುಪತಿಯು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಒಂದು ಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ಅರಸೀಕೆರೆ ಯಿಂದ ೨ ಕಿ.ಮಿ ಹಾಗೂ ಹಾಸನ ಜಿಲ್ಲಾ ಕೇಂದ್ರದಿಂದ ೪೫ ಕಿ.ಮೀ ದೂರವಿದೆ. ಪ್ರಕೃತಿ ದೇವಿಯ ಮಡಿಲಲ್ಲಿ ಮಲಗಿರುವ ಮುದ್ದು ಕಂದನಂತೆ ರಮಣೀಯ ನಿಸರ್ಗ ಹಾಗೂ ಆಧ್ಯಾತ್ಮಿಕ ಪವಿತ್ರ ತಾಣ ಇದಾಗಿದೆ. ಇಲ್ಲಿ ಶ್ರೀ ವೆಂಕಟರಮಣ ದೇವಾಲಯಕ್ಕೆ ಸುದೀರ್ಘ ಇತಿಹಾಸವಿದೆ. ಹಿಂದಿನ ಕಾಲದಲ್ಲಿ ವಶಿಷ್ಟ~ ಮಹಾ ಋಷಿಗಳು ಸುಮಾರು ೧೨೦೦ ಮೆಟ್ಟಿಲುಗಳನ್ನು ಹೊಂದಿರುವ ಈ ಬೆಟ್ಟದ ಮೇಲೆ ಆಶ್ರಯ ಮಾಡಿಕೊಂಡು ಶ್ರೀ ವೆಂಕಟೇಶ್ವರ ಸ್ವಾಮಿ ವಿಗ್ರಹವನ್ನು ಸ್ಥಾಪಿಸಿ ತಪಸ್ಸು ಮಾಡುತ್ತಿದ್ದರು. ಕಾಲಕ್ರಮೇಣ ತಪಸ್ಸು ಸಿದ್ಧಿಯಾದ ನಂತರ ಅಲ್ಲಿಂದ ಪ್ರಯಾಣ ಬೆಳಸಿದರು ಎಂಬ ಕಥೆಯೂ ಇದೆ.

ಈ ಪ್ರಾಂತ್ಯವನ್ನು ಆಳಿದ್ದ ಚಿತ್ರದುರ್ಗದ ಅರಸು ಪಾಳ್ಯಗಾರನಾದ ತಿಮ್ಮಪ್ಪ ನಾಯ್ಕ ಪ್ರತಿ ವರ್ಷ ಸ್ವಾಮಿಯ ದರ್ಶನಕ್ಕಾಗಿ ದೊಡ್ಡ ತಿರುಪತಿ ಯಾತ್ರೆಗಾಗಿ ಹೋಗುತ್ತಿದ್ದ. ಯಾತ್ರೆ ಸಾದ್ಯವಾಗದೆ ಚಿಂತೆಯಲ್ಲಿ ಇರುವಾಗ ಒಂದು ರಾತ್ರಿ ಕನಸಿನಲ್ಲಿ ತುಳಸಿ ಮಾಲೆಯನ್ನು ಹಾಕಿಕೊಂಡು

ಬೆಟ್ಟಕ್ಕೆ ಹೋಗಿರುವ ಜಾಗದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸು ಎಂದು ಹೇಳಿ ಬೆಟ್ಟದ ಮೇಲೆ ಅಂತ್ಯಗೊಂಡ ಜಾಗದಲ್ಲಿ ನನ್ನನ್ನು ಪ್ರತಿಷ್ಠಾಪಿಸು ಎಂದು ಹೇಳಲಾಗಿ ಅದರಂತೆ ಈ ದೇವಾಲಯವನ್ನು ನಿರ್ಮಿಸಿದ. ಇಲ್ಲಿರುವ ಬೆಟ್ಟಗಳು ಮಾಲೆಯ ಆಕಾರದಲ್ಲಿರುವುದರಿಂದ ಇದನ್ನು ಮಾಲೆಕಲ್ಲು ತಿರುಪತಿ ಎಂದು ಕಥೆ ಪ್ರಚಲಿತದಲ್ಲಿದೆ. ಈ ದೇವಾಲಯದ ಬುಡದಲ್ಲಿ ಸುಂದರ ಹಾಗೂ ನಿರ್ಮಲವಾದ ಪುಷ್ಕರಣಿಯು ಎಲ್ಲರ ಗಮನ ಸೆಳೆಯುತ್ತದೆ.

ಈ ಬೆಟ್ಟದಲ್ಲಿ ವಶಿಷ್ಠ ಮಹರ್ಷಿಗಳು ಶ್ರೀಮನ್ ನಾರಾಯಣನ್ನು ಕುರಿತು ತಪಸ್ಸುಮಾಡಿದ ಪುಣ್ಯ ಸ್ಥಳ. ಆಶಾಢ ಮಾಸದ ದ್ವಾದಶಿಯಂದು ಶ್ರೀವಿಷ್ಣುವಿನ ದರ್ಶನ ಪಡೆದರೆಂದೆ ಹೇಳಲಾಗುತ್ತೆದೆ. ಅದೇ ರೀತಿ ಅಶ್ವತ್ಥಾಮಾಚಾರ್ಯರು ಬ್ರಹ್ಮ ಹತ್ಯಾ ದೋಷ ನಿವಾರಣೆಗಾಗಿ ವಸಿಷ್ಠ ತೀರ್ಥದಲ್ಲಿ ಮಿಂದು ತಪಸ್ಸು ಮಾಡಿದ. ಆಶಾಢ ದ್ವಾದಶಿ ದಿನ ಶ್ರೀನಿವಾಸನ ದರ್ಶನ ಪಡೆದರೆಂದು ಅದಕ್ಕಾಗಿಯೇ ಆಶಾಢ ಮಾಸದದ್ವಾದಶಿಯಂದು ಮಹಾರಥೋತ್ಸವ ನಡೆಸುವ ಪರಿಪಾಟವಿದ್ದು ಈ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿದ್ದು, ಸಾವಿರಾರು ಭಕ್ತರು ಆಗಮಿಸಿ ಧನ್ಯರಾಗುತ್ತಿದ್ದಾರೆ.

**ಹುಲ್ಲೇಕೆರೆ ಕೇಶವ ದೇವಾಲಯ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೪೦ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೧೫ ಕಿ.ಮೀ



ಹುಲ್ಲೇಕೆರೆ ಗ್ರಾಮವು ಗಂಡಸಿ ಹೋಬಳಿಗೆ ಸೇರಿದ್ದು ಅರಸೀಕೆರೆಯಿಂದ ಸುಮಾರು ೧೫ ಕಿ.ಮೀ ಹಾಗೂ ಜಿಲ್ಲಾ ಕೇಂದ್ರದಿಂದ ೪೦ ಕಿ.ಮೀ ದೂರದಲ್ಲಿದೆ. ಶ್ರೀ ಕೇಶವ ದೇವಾಲಯ ಹೊಯ್ಸಳ ವಾಸ್ತುಪ್ರಕಾರ ನಕ್ಷತ್ರಾಕಾರದ ಎತ್ತರ ಜಗುಲಿಯ ಮೇಲೆ ನಿರ್ಮಾಣವಾಗಿದೆ. ಸುಂದರ ಕಲಾಕೃತಿಗಳನ್ನು ಹೊಂದಿರುವ ಈ ದೇವಾಲಯವು ಅರಸೀಕೆರೆ ತಾಲ್ಲೂಕಿನ ಅತ್ಯಂತ ಆಕರ್ಷಣೀಯ ಐತಿಹಾಸಿಕ ಹಾಗೂ ಸುಂದರ ತಾಣವಾಗಿದೆ.

**ಜಾವಗಲ್ “ದೇವಾಲಯ ಶಿಲ್ಪವೈಭವ”**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೩೦ ಕಿ.ಮೀ



ಅರಸೀಕೆರೆ ತಾಲ್ಲೂಕಿನ ಜಾವಗಲ್ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯ ಹೊಯ್ಸಳ ದೇವಾಲಯವಾಗಿದ್ದು ಅತ್ಯಂತ ಪ್ರಸಿದ್ಧಿಯಾಗಿದೆ. ಅಂತರರಾಷ್ಟ್ರೀಯ ಕ್ರಿಕೇಟ್ ತಾರೆ “ಜಾವಗಲ್ ಶ್ರೀನಾಥ್‌ರ ಹೂಟ್ಟುರು. ಇದು ಅರಸೀಕೆರೆ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ. ಹಳೇಬೀಡಿನಿಂದ ಪೂರ್ವಕ್ಕೆ ೧೪ ಕಿ.ಮೀ. ದೂರದಲ್ಲಿದ್ದರೆ ಬಾಣವಾರದಿಂದ ೧೮ ಕಿ.ಮೀ. ದೂರದಲ್ಲಿದೆ.

ಜಾವಗಲ್‌ನ ಲಕ್ಷ್ಮೀನರಸಿಂಹ ಸ್ವಾಮಿ ನಿರ್ಮಾಣದ ಕಾಲ ಕ್ರಿ.ಶ. ೧೩ನೇ ಶತಮಾನ ಸೂತ್ತಲೂ ಪ್ರಕಾರ ಗೋಟೆಯನ್ನು ಹೊಂದಿರುವ ಈ ಸುಂದರ ದೇಗುಲ ಹೊಯ್ಸಳ ವಾಸ್ತು ಶೈಲಿಯಂತೆ ನಕ್ಷತ್ರಾಕಾರದ ವೇದಿಕೆಯ ಮೇಲೆ ನಿರ್ಮಿತವಾಗಿದೆ. ಇದೊಂದು ತ್ರಿಕೂಟಚಲ ಅಂದರೆ ಮೂರುಗರ್ಭಗಳನ್ನು ಹೊಂದಿದೆ. ವೇಣುಗೋಪಾಲ, ವೀರನಾರಾಯಣ, ಲಕ್ಷ್ಮೀನರಸಿಂಹಸ್ವಾಮಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ.

ಗರ್ಭಗೃಹಗಳ ಎದುರು ಒಂದು ನವರಂಗವಿದೆ ಹಾಗೂ ಮುಂಭಾಗದಲ್ಲಿ ಮುಖಮಂಟಪವಿದೆ. ಮುಖಮಂಟಪದಲ್ಲಿ ಪ್ರೇಕ್ಷಕರಿಗೆ ಕುಳಿತು ಕೊಳ್ಳಲು ಕಲ್ಲಿನ ಅಸನಗಳಿವೆ. ಮುಖಮಂಟಪದ ಕೆಂಕಗಳು ದುಂಡನೆಯಾಗಿದ್ದು ಮೇಲ್ಛಾವಣಿಯಲ್ಲಿ ಅಷ್ಟಾದಿಕ್ಪಾಲಕರನ್ನು ಒಳಗೊಂಡ ಆಕರ್ಷಕ ಭವನೇಶ್ವರಿ ದೇವಿ ಒಂದೊಂದು ರೀತಿ ಇದೆ.

ದೇವಾಲಯದ ಪ್ರವೇಶದ್ವಾರ ಎತ್ತರವಾಗಿದ್ದು ಪ್ರವೇಶದ ಎರಡು ಕಡೆಗಳಲ್ಲೂ ಆನೆ ನಿಲ್ಲಿಸಲಾಗಿದೆ. ದೇವಾಲಯದ ಮುಂಭಾಗ ವಿಜಯನಗರ ಕಾಲದ್ದು ಲಕ್ಷ್ಮೀನರಸಿಂಹ ದೇವಾಲಯದ ಹೊರಗೋಡೆಗಳ ಅತ್ಯಾಕರ್ಷಕವಾಗಿ ಅಲಂಕೃತವಾಗಿವೆ. ಗೋಡೆಯ ತಳಭಾದಲ್ಲಿ ೬ ಚಿತ್ರ ಮತ್ತು ಹಂಸಗಳ ಕೆತ್ತನೆಗಳನ್ನು ಹೊಂದಿದೆ. ಅದರ ಮೇಲೆ ದೊಡ್ಡಗಾತ್ರದ ಶಿಲ್ಪಗಳ ಸಾಲು ಇದೆ. ಈ ಪೈಕಿ ಬಲಮೂರಿ ಗಣೇಶ, ಲಕ್ಷ್ಮೀನರಸಿಂಹ, ಹರಿಹರ, ಪರಶುರಾಮ, ಕಾಳಿಂಗ ಮರ್ದನ ಮುಂತಾದ ಶಿಲ್ಪಗಳ ಪ್ರೇಕ್ಷಕರನ್ನು ಮೂಕ ವಿಸ್ಮತರನ್ನಾಗಿಸುತ್ತದೆ.

ರಾಜ್ಯದ ಶ್ರೀಮಂತ ಕಲಾ ಸಿರಿಗೆ ಈ ದೇಗುಲ ಒಮ್ಮೆ ನೋಡಿ ಕಲಾಸೌಂದರ್ಯ ಕಣ್ಣಾರೇ ಆಶ್ವಾದಿಸುವುದು ಚೆಂದ.

**ಸೋಮೇಶ್ವರ ಮತ್ತು ಚೆನ್ನಕೇಶವ ದೇವಾಲಯ ಹಾರನಹಳ್ಳಿ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೮ ಕಿ.ಮೀ



ಹೊಯ್ಸಳರ ಕಾಲದಲ್ಲಿ ಸ್ಥಾಪನೆಯಾದ ಹಾರನಹಳ್ಳಿಯ ಶ್ರೀ ಚೆನ್ನಕೇಶವ ಮತ್ತು ಸೋಮೇಶ್ವರ ದೇವಾಲಯಗಳು ಅಪೂರ್ವ ಶಿಲ್ಪಕಲಾ ಕೆತ್ತನೆಯಿಂದ ಪ್ರಸಿದ್ಧಿ ಪಡೆದಿದೆ. ಮೂಲತಹ ಹಾರುವನಹಳ್ಳಿ ಎಂಬ ಹೆಸರು ಪಡೆದ ಈ ಗ್ರಾಮ ಹಿಂದೆ ತಾಲ್ಲೂಕು ಕೇಂದ್ರವಾಗಿತ್ತು. ಈ ದೇವಾಲಯವು ನಕ್ಷತ್ರಾಕಾರದ ವೇದಿಕೆಯ ಮೇಲೆ ನಿರ್ಮಾಣವಾಗಿದ್ದು, ಮೊದಲನೆ ಸಾಲಿನಲ್ಲಿ ಗಜಗಳ ಸಾಲುಗಳಿವೆ. ಎರಡನೇ ಸಾಲಿನಲ್ಲಿ ಅಶ್ವ ಸಾಲುಗಳಿವೆ, ಎಲೆ ಬಳ್ಳಿ ಹಂಸವುಳ್ಳ ಇತರ ಸಾಲುಗಳು ನಿರ್ಮಲ ಮತ್ತು ಶಾಂತಿ ಸಂಕೇತವಾಗಿದೆ. ದೇವಾಲಯವನ್ನು ನೋಡುತ್ತಿದ್ದರೆ ಹೊಯ್ಸಳರ ಕಾಲವು ನೆನಪಾಗುತ್ತದೆ. ದೇವಾಲವು ಸುಂದರವಾದ ಚಾವಣಿ ವಿನ್ಯಾಸ ಅಲಂಕೃತ ಕೆತ್ತನೆಯ ದ್ವಾರ ಬಾಗಿಲು ಜಾಲಂದರಗಳು ಕಕ್ಷಾಸನವನ್ನು ಹೊಂದಿದೆ. ದೇವಾಲಯದ ದ್ವಾರದ ಮುಂಬಾಗದಲ್ಲಿ ವಿಜಯ ನಗರ ಶೈಲಿಯ ಗ್ರಾನೈಟ್ ಕಲ್ಲಿನ ಪ್ರವೇಸ ಮಂಟಪವಿದ್ದು ಎತ್ತರವಾದ ಮಂಟಪವನ್ನು ಹೊಂದಿದ್ದು ನೋಡುಗರ ಕಣ್ಮನ ಸೆಳೆಯುವಂತಿದೆ.

**ಬಿಳಿಕಲ್ ರಂಗನಾಥ ಸ್ವಾಮಿ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೬೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೫ ಕಿ.ಮೀ



ಹಿರೆಕಲ್ಲು ಬೆಟ್ಟ್, ಸಿದ್ದರ ಬೆಟ್ಟ, ಹೀಗೆ ನಾನಾರೀತ್ಯ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನಲೆಯುಳ್ಳ ಬೆಟ್ಟದ ತಪ್ಪಲಿಗೆ ಹೊಂದಿಕೊಂಡಂತೆ ಇರುವ ಶ್ರೀ ಬಿಳಿಕಲ್ಲು ರಂಗನಾಥ ಸ್ವಾಮಿ ದೇವಾಲಯವು ಪುಣ್ಯ ಕ್ಷೇತ್ರವಾಗಿ ಮೆರೆದಿದೆ. ಹೊಯ್ಸಳರ ಕಾಲದಲ್ಲಿ ಈ ತಾಣವು ಹಲಕೂರು ರಾಜ್ಯವಾಗಿತ್ತು. ಹನ್ನೊಂದನೆಯ ಶತಮಾನದಲ್ಲಿ ಹೊಯ್ಸಳರ ಮಾಂಡಲೀಕರು ಆಳುತ್ತಿದ್ದರು.

ಈ ದೇವಾಲಯವು ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ್ದು,ಪ್ರತಿ ವರ್ಷ ಚೈತ್ರ ಮಾಸದಲ್ಲಿ ಹುಣ್ಣಿಮೆ ದಿನದಂದು ಜಾತ್ರ ಬಹಳ ವಿಜೃಂಬಣೆಯಿಂದ ನಡೆಯುತ್ತದೆ. ಭಕ್ತಾದಿಗಳಲ್ಲಿ ಈ ದೇವರ ಬಗ್ಗೆ ನಂಬಿಕೆ ಇದ್ದು, ದೇವರ ಅಪ್ಪಣೆ ಇಲ್ಲದೆ ಯಾವ ಕೆಲಸವನ್ನು ಸಹ ಮಾಡುವುದಿಲ್ಲ. ಈ ದೇವರನ್ನು ಪೂರ್ಣನಂಬಿದವರಿಗೆ ಅವರ ಇಷ್ಟಾರ್ಥಗಳು ಅಂದಿನಿಂಧ ಇಂದಿಗೂ ಮುಂದೆಯೂ ನೆರವೇರುವುದೆಂಬ ನಂಬಿಕೆ ಭಕ್ತಾದಿಗಳಲ್ಲಿ ಅಚಲವಾಗಿದೆ.

**ಅರಕೆರೆ ಕೇಶವ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೦ ಕಿ.ಮೀ



ಅರಕೆರೆ ಗ್ರಾಮವನ್ನು ಸರ್ವಜ್ಞಪುರ ಎಂದು ಕರೆಯಲಾಗಿದ್ದು, ಕೇರಳದ ಕೋಳ್‌ಮಾಕ ಪಟ್ಟಣಕ್ಕೆ ಸೇರಿದ ಗೋವಿಂದ ಎಂಬಾತನು ಈ ಗ್ರಾಮದ ಆಧಳಿತಾಧಿಕಾರಿಯಾಗಿದ್ದನು. ಈತನ ಮಗ ದಾಮೊದರ ಶೆಟ್ಟಿಯು ಈ ದೆವಾಲಯವನ್ನು ಕಟ್ಟಿಸಿ ಆದಿ ಕೇಶವ ನರಸಿಂಹ ಗೋಪಾಲಕೃಷ್ಣ ದೇವರ ಪ್ರತಿಷ್ಠಾಪನೆ ಮಾಡಿರುತ್ತಾನೆ. ಈ ದೇವಾಲಯವು ಸುಂದರವಾಗಿದ್ದು ನೋಡುಗರ ಆಕರ್ಷಕ ಸುಂದರವಾದ ಕೆತ್ತನೆಯಿಂದ ಎಲ್ಲರ ಗಮನ ಸೆಳೆಯುತ್ತದೆ.

## ಅರಕಲಗೂಡು ತಾಲ್ಲೂಕಿನ ಪ್ರಮುಖ ಸ್ಥಳಗಳು

**ಶ್ರೀ ರಾಮೇಶ್ವರ ಕ್ಷೇತ್ರ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೧ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೦ ಕಿ.ಮೀ



ಶ್ರೀಕ್ಷೇತ್ರ ರಾಮನಾಥಪುರ ಹೋಬಳಿ ಕೇಂದ್ರ. ಶ್ರೀರಾಮೇಶ್ವರ ಕ್ಷೇತ್ರ ಅಧಿಪತಿ ದೇವಾಲಯ. ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಹೆಚ್ಚು ಭಕ್ತಾಧಿಗಳಿಂದ ಕೂಡಿರುತ್ತದೆ. ಶ್ರೀ ಪಟ್ಟಾಭಿರಾಮ ದೇವಸ್ಥಾನ – ಪ್ರತಿ ತಿಂಗಳು ಡಿಸೆಂಬರ್ ಮಾಹೆಯಲ್ಲಿ ರಥೋತ್ಸವ ನಡೆಯುತ್ತಿದ್ದು, ಉತ್ತಮ ರಾಸುಗಳ (ಜಾತ್ರೆ) ಪ್ರದರ್ಶನವಾಗುತ್ತದೆ. ಶ್ರೀಕ್ಷೇತ್ರ ರಾಮನಾಥಪುರದಲ್ಲಿ ಮೀನಿನ ಪುಷ್ಕರಣಿ ಇದ್ದು ಇಲ್ಲಿ ಸಾವಿರಾರು ಮೀನುಗಳಿವೆ. ನೋಡಲು ನಯನಮನೋಹರವಾಗಿದೆ. ಇಲ್ಲಿಯ ರೈತರ ವಾಣಿಜ್ಯ ಬೆಳೆ ತಂಬಾಕು. ಇಲ್ಲಿ ತಂಬಾಕು ಮಾರುಕಟ್ಟೆಯೂ ಇದೆ

**ಶ್ರೀ ಸಪ್ತಸ್ವರ ದೇವತಾ ಧ್ಯಾನಮಂದಿರ – ರುದ್ರಪಟ್ಟಣ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೯ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೭ ಕಿ.ಮೀ



ಕರ್ನಾಟಕದಲ್ಲೇ "ಸಂಗೀತ ಗ್ರಾಮ"ವೆಂದೂ ಹೆಸರಾದ ಊರಿದು, ೨೦೦೮ರಲ್ಲಿ ಶ್ರೀ ಸಪ್ತಸ್ವರ ದೇವತಾ ಧ್ಯಾನ ಮಂದಿರ ನಿರ್ಮಾಣವಾಗಿದೆ. ಇದರ ರುವಾರಿಗಳು ವಿದ್ವಾನ್ ಶ್ರೀ ಆರ್.ಕೆ. ಪದ್ಮನಾಭರರು. ೫೫ ಅಡಿ ಎತ್ತರ ಉಳ್ಳ ಸಂಗೀತದ ಸ್ವರಗಳನ್ನು ಪ್ರತಿನಿಧಿಸುವಂತಹ ಸಂಗೀತಾಚಾರ್ಯರುಗಳಾದ ಪುರಂದರ, ಕನಕ, ವಾದಿರಾಜ, ತ್ಯಾಗರಾಜ ಮತ್ತು ಸ್ವಾಮಿ ದೀಕ್ಷಿತರು ಶ್ಯಾಮಾಶಾಸ್ತ್ರಿಗಳು ಮತ್ತು ವಿದ್ಯಾ ಅಧಿ ದೇವತೆಯಾದ ಸರಸ್ವತಿ ದೇವಿಯ ವಿಗ್ರಹಗಳಿವೆ. ವಿಶ್ವದಲ್ಲೇ, ಈ ನಾದ ಮಂಟಪ ಮೊದಲನೆಯದ್ದಾಗಿರುತ್ತದೆ. ಪ್ರತಿವರ್ಷ ಇಲ್ಲಿ ಮೇ ಮಾಹೆಯಲ್ಲಿ ೦೩ ದಿನಗಳ ಉತ್ತರದ ವಿಶ್ವಾಸ ಆರ್.ಕೆ ಪದ್ಮನಾಭನ್‌ರವರ ನೇತೃತ್ವದಲ್ಲಿ ನಡೆಯುತ್ತದೆ.

**ಕಟ್ಟೆಪುರ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೭ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೫ ಕಿ.ಮೀ



ಕಾವೇರಿನದಿಗೆ ಅಡ್ಡಲಾಗಿ ಕ್ರಿ.ಶ. ೧೯೩೭ನೇ ಇಸವಿಯಲ್ಲಿ ನಿರ್ಮಿಸಿದ್ದು, ಕಾವೇರಿ ನದಿ ಎತ್ತರದ ಬಂಡೆಗಳ ಮೇಲೆ ಹರಿದು ನೊರೆಯಾಗಿ ಧುಮುಕುತ್ತಿದ್ದು ನೋಡಲು ನಯನ ಮನೋಹರವಾಗಿದೆ.ಸಾವಿರಾರು ಎಕರೆ ಜಮೀನಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಲಾಗಿದೆ .

**ತೂಗುಸೇತುವೆ**

ದೂರ ಎಷ್ಟು?

ಜಿಲ್ಲಾ ಕೇಂದ್ರದಿಂದ : ೫೬ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೪ ಕಿ.ಮೀ



ತೂಗು ಸೇತುವೆ ಕೊಣನೂರಿನಿಂದ ಮಟ್ಟದಿಂದ ೦೧ ಕಿ.ಮೀ ಅಂತರದಲ್ಲಿದೆ ಈ ಸೇತುವೆಯ ತಾಂತ್ರಿಕತೆ ಪುತ್ತೂರು ಎಂಜಿನಿಯರಿಂಗ್ ಸಂಸ್ಥೆಯದಾಗಿದ್ದು, ಜಿಲ್ಲಾ ಪಂಚಾಯತ್ ಹಾಸನ ಕಾಮಗಾರಿಯಾಗಿದೆ. ಕಟ್ಟೇಪುರ, ಮಾದಾಪುರ, ಗೊಬ್ಬಳಿ, ಗೊಬ್ಬಳಿ ಕಾವಲ್ ಗ್ರಾಮಗಳಿಗೆ ಸಂಪರ್ಕ ಸೇತುವಾಗಿದೆ. ಇದು ಕರ್ನಾಟಕದಲ್ಲಿ ಅತಿ ಉದ್ದದ ೨ನೇ ತೂಗು ಸೇತುವೆ ಇದು ೧೯೯೭-೯೮ನೇ ಸಾಲಿನಲ್ಲಿ ನಿರ್ಮಾಣವಾಗಿದೆ. ಇದರ ಅಂದಾಜು ವೆಚ್ಚ ೩೫ ಲಕ್ಷ ರೂ. ಇದರ ಉದ್ದ ೧೮೦ಮೀಟರ್‌ಗಳು.

**ಚತುರ್ಯುಗ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೦ ಕಿ.ಮೀ



‘ದಕ್ಷಿಣ ಕಾಶಿ’ ಎಂದು ಹೆಸರುವಾಸಿಯಾಗಿರುವ ರಾಮನಾಥಪುರ ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿದ್ದು, ಕಾವೇರಿ ಮಡಿಲಿನಲ್ಲಿರುವ ಕ್ಷೇತ್ರವಾಗಿದೆ. ಇಲ್ಲಿರುವ ಚತುರ್ಯುಗ ಮೂರ್ತಿ ಶ್ರೀ ರಾಮೇಶ್ವರ ಸ್ವಾಮಿ ದೇವಾಲಯವು ಹೊಯ್ಸಳ ಕಾಲದ ೨ನೇ ಸೋಮೇಶ್ವರನ ಕಾಲದಲ್ಲಿ ನಿರ್ಮಿಸಲಾಗಿರುತ್ತದೆ. ಇಲ್ಲಿರುವ ಇತರೆ ಪ್ರಮುಖ ದೇವಾಲಯಗಳು.

ಶ್ರೀ ಅಗಸ್ತ್ರೇಶ್ವರ ಸ್ವಾಮಿ ದೇವಾಲಯ, ಪ್ರಸನ್ನ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯವರ ದೇವಾಲಯ, ಶ್ರೀ ಪಟ್ಟಾಭಿರಾಮಸ್ವಾಮಿ ದೇವಾಲಯ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿಯವರ ದೇವಾಲಯ ರಾಮೇಶ್ವರ ಸ್ವಾಮಿಯವರ ಪುಷ್ಕರಣಿಯಲ್ಲಿರುವ ಸಾವಿರಾರು ಮೀನುಗಳು ನೋಡಲು ನಯನ ಮನೋಹರವಾಗಿವೆ.

ವೈಶಾಖ ಶುದ್ಧ ತೃತೀಯಾ ದಿವಸ ಉದ್ಭವ ಮೂರ್ತಿಯಾದ ರಾಮೇಶ್ವರ ಸ್ವಾಮಿಗೂ ವೈಶಾಖ ಶುದ್ಧ ಮೃಗಶೀರಾ ನಕ್ಷತ್ರ ಯುಕ್ತವಾದ ತಿಥಿಯಲ್ಲಿ ಪಟ್ಟಾಭಿರಾಮ ಸ್ವಾಮಿಗೂ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಪ್ರಸನ್ನ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಗೂ ಮಾಘ ಬಹುಳ ಅಮಾವಾಸ್ಯೆಯ ದಿನ ಅಣಸ್ಯೇಶ್ವರ ಸ್ವಾಮಿಗೂ ರಥೋತ್ಸವಗಳು ನಡೆಯುತ್ತವೆ. ಇಲ್ಲಿ ರಾಸುಗಳ ಜಾತ್ರೆಯು ನಡೆಯುತ್ತದೆ

**ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೪೦ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೦೮ ಕಿ.ಮೀ



ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಹುಲಿಕಲ್ಲು ಗ್ರಾಮದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯವು ಸುಮಾರು ೭೦೦ ವರ್ಷಗಳ ಹಳೆಯ ದೇವಾಲಯ ಇದನ್ನು ೧೯೮೬ನೇ ಸಾಲಿನಲ್ಲಿ ಪ್ರತಿಷ್ಠಾಪಿಸಿ ಶ್ರೀಯುತ ಕಸ್ತೂರಿ ರಂಗನ್‌ರವರ ಮೇಲ್ವಿಚಾರಣೆಯಲ್ಲಿ ಉಸ್ತುವಾರಿ ಕೈಗೊಳ್ಳಲ್ಪಡುತ್ತಿದೆ. ಈ ದೇವಾಲಯದಲ್ಲಿ ರಥೋತ್ಸವ ಪ್ರತಿ ವರ್ಷ ಯುಗಾದಿ ಹಬ್ಬ ಕಳೆದು ೨೦ನೇ ದಿನಕ್ಕೆ ನಡೆಯುತ್ತದೆ. ಈ ಗ್ರಾಮದ ಸುತ್ತಮುತ್ತಲಿನ ಸಹಸ್ರಾರು ಜನರು ಭಕ್ತಾದಿಗಳು ದೇವರ ದರ್ಶನ ಪಡೆಯುತ್ತಿದ್ದಾರೆ ಶ್ರೀಯುತ ಐ.ಜಿ.ಪಿ. ಕಸ್ತೂರಿ ರಂಗನ್‌ರವರ ಜನ್ಮಸ್ಥಳ ಇದಾಗಿರುತ್ತದೆ.

## ಸಕಲೇಶಪುರ ತಾಲ್ಲೂಕಿನ ಪ್ರಮುಖ ಸ್ಥಳಗಳು

**ಮಂಜರಾಬಾದ್ ಕೋಟೆ, ಸಕಲೇಶಪುರ**
**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೫೩ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೦೩ ಕಿ.ಮೀ



ಕ್ರಿ.ಶ. ೧೭೯೨ರಲ್ಲಿ ಟಿಪ್ಪು ಸುಲ್ತಾನ್ ಈ ಕೋಟೆ ಕಟ್ಟಿಸಿದನು

ಭೂಮಟ್ಟದಿಂದ ೩೨೯೩ ಅಡಿ ಎತ್ತರದಲ್ಲಿರುವ ಅಡಾಣಿ ಗುಡ್ಡದ ಮೇಲೆ ನಿರ್ಮಿಸಿದ ಟಿಪ್ಪುವಿನ ಗಿರಿದುರ್ಗ ಮಂಜರಾಬಾದ್ ಕೋಟೆ. ಕೋಟೆಯ ಮುಂಭಾಗ ಸೂಕ್ಷ್ಮವಾದ ಅಲಂಕಾರದೊಡನೆ ಮೊದಲನೇ ದ್ವಾರ ಹಿಂದೂ ಮುಸ್ಲಿಂ ಶೈಲಿಯಲ್ಲಿದೆ. ಕೆಳಹಂತದಿಂದ ೯೦೦ ಡಿಗ್ರಿಯಲ್ಲಿ ರಚಿತವಾದ ೨೫೨ ಮೆಟ್ಟಿಲುಗಳು. ಸುಂದರ ಕಲಾಕೃತಿಯುಳ್ಳ ಕೋಟೆಯು ೧ನೇ ಬಾಗಿಲು.

ಹೊರಗಿನವರನ್ನು ಒಳಗೆ ಬಿಡುವಾಗ, ತಪಾಸಣೆ ಮಾಡಲೆಂದು ಕಟ್ಟಡದ ಪರಿವೀಕ್ಷಣಾ ಕೊಠಡಿಗಳಿವೆ. ಕೋಟೆಯ ವಾಸ್ತವಿಕ ನಕ್ಷೆಯನ್ನು ೩ನೇ ಬಾಗಿಲಿನಲ್ಲಿ ಭುವನೇಶ್ವರಿ ಚಿತ್ರ ಬಿಡಿಸುವ ಸ್ಥಳದಲ್ಲಿ ರಚಿಸಲಾದ ನಕ್ಷತ್ರಾಕಾರದ ಕೋಟೆಯಿದೆ. ಕೋಟೆಯ ಹಿಂಬದಿಯ ಕಂದಕದ ಮೂಲೆಯ ನೋಟ ಪದಭಾಗದಿಂದ ೨೫ ಅಡಿ ಎತ್ತರವಾಗಿ ಕೋಟೆ ಇದೆ. ಮುಖ್ಯ ಕೋಟೆಯ ಆಗ್ನೇಯ ದಿಕ್ಕಿನಲ್ಲಿ ರಚಿತವಾದ ಕಲಾತ್ಮಕತೆಯ ಗೋಪುರ. ಚೌಕಾಕಾರವಾಗಿ ಕಾಣುವ ರಹಸ್ಯಕೋಣೆ, ಮದ್ದು ಸಂಗ್ರಹಿಸಿಡುತ್ತಿದ್ದ ಕೋಣೆಗಳಿವೆ. ಕೋಟೆಯ ಮಧ್ಯಬಿಂಧುವಿನಲ್ಲಿರುವ ೪೦ x ೪೦ ಅಡಿ ಅಳತೆಯ ೪ ದಿಕ್ಕುಗಳಲ್ಲಿಯೂ ಮೆಟ್ಟಿಲಿರುವ ಕೊಳಗಳಿವೆ.

**ತೂಗು ಸೇತುವೆ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೧೧೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೬೦ ಕಿ.ಮೀ



ಕಾಗಿನದಿ :- ಸಕಲೇಶಪುರದಿಂದ ೬೦ ಕಿ.ಮೀ ಅಂತರದಲ್ಲಿರುವ ಈ ಸ್ಥಳ ಪ್ರೇಕ್ಷಣೀಯವಾಗಿದೆ. ಹಳೆಯ ಕೋಟೆ ಮತ್ತು ಸೃಷ್ಟಿಯ ಸೊಬಗು ಆಕರ್ಷಕವಾಗಿದೆ. ಬ್ರಿಟಿಷರ ಕಾಲದ ಬ್ಯೂಟಿಸ್ಪಾಟ್ ಕಣ್ಣೆದುರಿಗೆ ಮಡಿಕೇರಿ ಜಿಲ್ಲೆಯ ಕುಮಾರ ಪರ್ವತ ಈ ಕಡೆ ದಕ್ಷಿಣ ಕನ್ನಡ ಜಿಲ್ಲೆ ಘಟ್ಟ ಶ್ರೇಣಿ ಮತ್ತು ಜೇನುಕಲ್ಲು ಗುಡ್ಡಗಳಲ್ಲಿರುವ ಕಣಿವೆ ಕಂದಕಗಳ ನಿತ್ಯಹರಿದ್ವರ್ಣಮಯ ರಮ್ಯ ಸೊಬಗು ಒಟ್ಟಾರೆಯಾಗಿ ಗೋಚರಿಸುತ್ತವೆ. ೩ ರಿಂದ ೪ ಸಾವಿರ ಅಡಿಗಳಿಗೂ ಎತ್ತರವಾದ ಈ ಪರ್ವತ ಸಮುಚ್ಚಯಗಳು ಒಟ್ಟಾರೆಯಾಗಿ ಕಾಣುವಂತೆ, ಸಕಲೇಶಪುರದಿಂದ ಸುಬ್ರಹ್ಮಣ್ಯಕ್ಕೆ ಹೋಗುವ ರಸ್ತೆಯ ಮುಂದೆ ಬ್ರಿಟಿಷರ ಕಾಲದಲ್ಲಿಯೇ ಒಂದು ಕಟ್ಟೆಯನ್ನು ಕಟ್ಟಿದ್ದಾರೆ. ಈ ಕಟ್ಟೆಯ ಮೇಲೆ ನಿಂತು ನೋಡಿದಾಗ ಉತ್ತುಂಗ ಶಿಖರ ಶ್ರೇಣಿ ಅಲ್ಲಲ್ಲಿ ಮೇಲಿನಿಂದ ಬಿಳಿಹಾವಿನಂತೆ ಹರಿದು ಬರುವ ಜರಿಜಲಪಾತ ಹಸಿರು ಪ್ರಕೃತಿಗಳು ಗೋಚರಿಸುತ್ತವೆ. ಇದೊಂದು ರಮ್ಯ ಮನೋಹರವಾದ ಸ್ಮರಣೀಯ ಸ್ಥಳವಾಗಿದೆ.

**ಕಾಡುಮನೆ ಎಸ್ಟೇಟ್**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೭೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೫ ಕಿ.ಮೀ



೧೫೦ ವರ್ಷಗಳ ಹಿಂದೆ ಬೆಟ್ಟಗುಡ್ಡ ಕಂದರಗಳಿಂದ ಕೂಡಿದ್ದ ಈ ಸ್ಥಳವು ಮೊದಲು ಕಾಫಿ ತೋಟವಾಗಿ ಇದೀಗ ಸಾವಿರಾರು ಎಕರೆ ಭೂ ಪ್ರದೇಶದಲ್ಲಿರುವ ಟೀ (ಚಹ) ಎಸ್ಟೇಟ್ ಆಗಿ ನಿರ್ಮಾಣವಾಗಿದೆ. ೩,೦೦೦ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಇಲ್ಲಿ ಟೀ ಸಂಸ್ಕರಣ ಕೇಂದ್ರವಾಗಿದ್ದು, ಕಾಡಿನೊಳಗಿರುವ ಮನೆಗಳ ಎಸ್ಟೇಟ್ ಇದಾಗಿ "ಕಾಡುಮನೆ ಎಸ್ಟೇಟ್ ಎಂದೇ ಕರೆಯಿಸಿಕೊಳ್ಳುತ್ತಿದ್ದ. ಇಡೀ ಕರ್ನಾಟಕದಲ್ಲಿ ಈ ಟೀ ಎಸ್ಟೇಟ್ ಸುಂದರ ಪ್ರಕೃತಿಯ

ಮಡಿಲಲ್ಲಿ ಇದೆ ವಿಹಾರಧಾಮವಾಗಿ ಪ್ರೇಕ್ಷಣೀಯ ಸ್ಥಳವಾಗಿ ಪರಿಣಮಿಸಿದ ಈ ಕಾಡು ಮನೆಯಲ್ಲಿ ಏಲಕ್ಕಿಯನ್ನು ಕೂಡ ಬೆಳೆಯಲಾಗುತ್ತಿದ್ದು ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರು, ಪುರುಷರು ಸ್ವಾವಲಂಬಿಗಳಾಗಿ ಜೀವನ ನಡೆಸಲು ಸಹಾಯಕವಾಗುತ್ತಿದೆ. ಉತ್ತಮ ಮಟ್ಟದ ಟೀ ಪುಡಿಯನ್ನು ತಯಾರಿಸುತ್ತಿದ್ದು ಇದರ ರುಚಿಗೆ ಜಿಲ್ಲಾದ್ಯಂತ ಹೆಚ್ಚಿನ ಬೇಡಿಕೆಯಿದೆ.

**ಉದಯವಾರ ದೊಡ್ಡಮನೆ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೬೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೪ ಕಿ.ಮೀ



ಮೈಸೂರಿನ ಅರಮನೆಯನ್ನೇ ಹೋಲುವ ಮಹಾಸೌದ ಕ್ರಿ.ಶ.೧೭೦೦ರಲ್ಲಿ ಲಿಂಗಣ್ಣಗೌಡರು ಅಪ್ರತಿಮವಾದ ಕಲಾಸೌಧವನ್ನು ಕಟ್ಟಿಸಿದ್ದಾರೆ. ಕಲಾ ಪ್ರೋತ್ಸಾಹದ ಅಭಿಮಾನಿಯೂ ಆvದ್ದ ಲಿಂಗಣ್ಣಗೌಡರು ಈ ಪರಿಸರದಲ್ಲಿ ಆಳ್ವಿಕೆ ಮಾಡಿದರಲ್ಲದೇ ಮೈಸೂರು ಅರಸರ ರಾಜ ಪ್ರತಿನಿಧಿಗಳೂ ಆಗಿದ್ದರೆಂದು ಹೇಳಲಾಗಿದೆ. ಬೇಲೂರಿನ ಶಿಲ್ಪಕಲಾ ವೈಭವವನ್ನು ನೋಡಿ ತಮ್ಮ ಊರಿನಲ್ಲಿಯೇ ಇಂತಹ, ಸೌಧವನ್ನು ಮರದಲ್ಲಿಯೇ, ನಿರ್ಮಿಸಬೇಕೆಂಬ ಕನಸು ಹೊತ್ತು ಕಟ್ಟಿಸಿದರೆಂದು ತಿಳಿದು ಬಂದಿದೆ. ಹೀಗಾಗಿ ಮಲೆನಾಡಿನ ಗರ್ಭದಲ್ಲಿ ಅರಳಿದ ಸುಂದರ ಕಲಾ ಭಂಡಾರವಿದಾಗಿದೆ.

ಕೊರಡಲ್ಲಿ ದವರು :- ಲ೦ ಭಾಗವೆಲ್ಲ ಮರದಲ್ಲಿಯೇ ಮಾಡಿದ ಹೊಯ್ಸಳ ಶೈಲಿಯ ವಿಭಿನ್ನ ಮಾದರಿಯ ಕಲಾಕೃತಿಗಳೇ ಆಗಿದೆ. ಕಂಬದಿಂದ ಕಂಬಗಳಲ್ಲಿ ಕೆತ್ತಲಾದ ಕಮಾನುಗಳು ವಿಜಯನಗರದ ಶೈಲಿಯವುಗಳಾಗಿವೆ. ಮೈಸೂರಿನ ಅರಮನೆಯ ಮೂರ್ತಿ ಸ್ವರೂಪದಂತಹ ಕಲಾಪ್ರಕಾರದ ಸಾಧನವನ್ನು ೩೦೦ x ೩೦೦ ಅಡಿಗಳ ವಿಸ್ತಾರದಲ್ಲಿ ಅರಮನೆಯ ತದ್ರೂಪ ತಾಳೀತು. ವಿಜಯನಗರದ ಸಾಂಸ್ಕೃತಿಕ ಶೈಲಿಯ ಕಮಾನಿನ ಮೈಸೂರಿನ ಛಾಯೆ ರೂಪುಗೊಂಡಿತು.

ಈಗಲೂ ಸಹ ಖ್ಯಾತಿವೆತ್ತ ಈ ವೃತ್ತಕಾರದ ಸ್ಮಾರಕಗಳಾದ, ಕತ್ತಿ, ಗುರಾಣಿ, ಬರ್ಜಿ, ಶಾಲು, ರಾಜರಾಜೇಶ್ವರಿ ನೂರಾರು ಫಿರಂಗಿ ಗುಂಡುಗಳು ಕಲ್ಲಿನ ದೋಣಿ ಉಯಲೆ ಮಂಚ, ಇತ್ಯಾದಿ ನೋಡಲು ಲಭ್ಯವಾಗಿದೆ.

**ಸಕಲೇಶಪುರದ ಶಾಖಾ ಗ್ರಂಥಾಲಯ:**



ಗ್ರಂಥಗಳ ಆಲಯವಾದ ಇಲ್ಲಿಯ ಗ್ರಂಥಾಲಯದಲ್ಲಿ ಸಾಹಿತಿ, ಮತ್ತು ಇತಿಹಾಸಕಾರರಾದ ಚಂದ್ರಶೇಖರ್ ಧೂಳೇಕರ್ ಅವರ ಶ್ರಮದ ಸಾಧನೆಯ ಫಲವಾಗಿ ಗ್ರಂಥಾಲಯದಲ್ಲಿ ವಸ್ತು ಸಂಗ್ರಹಾಲಯವೊಂದು, ನಿರ್ಮಾಣವಾದದ್ದು, ವಿಶೇಷವೆಂದೇ ಹೇಳಬಹುದು. ಇಲ್ಲಿ ವಸ್ತುಗಳು ಸ್ವತಂತ್ರವಾದರೂ ಇವರು ಇಲ್ಲಿಯ ಗ್ರಂಥಪಾಲಕರು ಆಗಿದ್ದರಿಂದ ಸಾಮಾನ್ಯ ಜನರ ಐತಿಹಾಸಿಕ ಪ್ರಜ್ಞೆಯನ್ನು ಹೆಚ್ಚಿಸಲಕ್ಕಾಗಿ ಈ ವಿನೂತನ ಪ್ರಯತ್ನವನ್ನು ಮಾಡಿದ್ದಾರೆ.

**ದಾಖಲೆಗಳು :-** ಈ ಗ್ರಂಥಾಲಯ ಒಂದು ಕೊಠಡಿಯಲ್ಲಿ ೫೦೦ ವರ್ಷಗಳ ಹಿಂದಿನ ಹಸ್ತ ಪ್ರತಿಗಳು ೧೦೦ ವರ್ಷಗಳ ಹಿಂದಿನ ಚಾಪ ಕಾಗದಗಳು, ಟಿಪ್ಪು ಕಾಲದ ಪತ್ರಗಳು, ಐತಿಹಾಸಿಕ ಕಾಲದ ರಶೀದಿಗಳು, ಸಾಹಿತಿಗಳ ಹಸ್ತಾಕ್ಷರಗಳು, ಸ್ವಾತಂತ್ರ್ಯ ಪೂರ್ವದ ಪತ್ರಿಕೆಗಳು, ಬ್ರಿಟಿಷರ ಕಾಲದ ಅಂಚೆ ಪತ್ರಗಳು, ಮತ್ತು ಕವರುಗಳು ಸ್ವಾತಂತ್ರ್ಯ ಪೂರ್ವದ ಆಹ್ವಾನ ಪತ್ರಗಳು ಲಾಟರಿ ಟಿಕೇಟುಗಳು ಮತ್ತು ೫೦೦ ವರ್ಷಗಳ ವಂಶವೃಕ್ಷ ಸಹ ಇಲ್ಲಿದ್ದು, ಪಿ.ಹೆಚ್.ಡಿ. ವಿದ್ಯಾರ್ಥಿಗಳೇ ಆಕಾರವಾಗಿದೆ.

**ಸಂದರ್ಭ ಸೇವಾ ವಿಭಾಗ :-** ಈ ವಿಭಾಗದಲ್ಲಿ ವೈವಿಧ್ಯಮಯ ವಸ್ತುಗಳು ಇದ್ದು, ಮೊದಲನೆದಾಗಿ ೩೦ದೇಶಗಳ ಕರೆನ್ಸಿ ನೋಟುಗಳು, ಸ್ವಾತಂತ್ರ್ಯ ಪೂರ್ವದ ಅಂಚೆ ಚೀಟಿಗಳು, ಐತಿಹಾಸಿಕ ಕಾಲದ ದ್ವೀಪಸ್ತಂಭಗಳು, ಸ್ವಾತಂತ್ರ್ಯ ಪೂರ್ವದ ಬೆಳ್ಳಿ, ಹಿತ್ತಾಳೆ, ತಾಮ್ರದ ನಾಣ್ಯಗಳು ೫೦೦ ವರ್ಷಗಳ ಹಿಂದಿನ ಸಂಸ್ಕೃತ ಹಳೆಗನ್ನಡದ ತಾಳೆ ಓಲೆ ಗ್ರಂಥಗಳು, ಪುಟ್ಟ ದೇವತಾ ವಿಗ್ರಹಗಳು, ಕಲಾತ್ಮಕ ಅಗ್ಗಿಷ್ಟಿಕೆ ವಿಶೇಷವಾದ ಸ್ಟೌವುಗಳು ಹಳೆಕಾಲದ ಕ್ಯಾಮರ್‌ಗಳು ಕಲಾತ್ಮಕ, ಹಿತ್ತಾಳೆ, ತಟ್ಟೆಲೆಗಳು, ಮಾಪನಗಳು, ಮೊಸಳೆ ಹಲ್ಲಿನ ಕತ್ತಿ ಮತ್ತು ಸಾಮಾನ್ಯ ಕತ್ತಿಗಳು, ಬೆಳ್ಳಿಯ ಸ್ತ್ರೀಯರ ಆಭರಣಗಳು, ಹೀಗೆ ಅಸಂಖ್ಯಾತ ವೈವಿಧ್ಯಮಯ ವರ್ಣ ರಂಜಿತ ಐತಿಹಾಸಿಕ ವಸ್ತುಗಳನ್ನು ಈ ಗ್ರಂಥಾಲಯದಲ್ಲಿ ಇರಿಸಲಾಗಿದೆ. ಈ ವಸ್ತುಗಳೆಲ್ಲ ಈ ಭಾಗದಲ್ಲಿ ದೊರೆತವುಗಳಾಗಿವೆ. ಮುಂದೊಂದು ದಿನ ಈ ವಸ್ತುಗಳ ಸಂರಕ್ಷಣೆಗಾಗಿ ಪಟ್ಟಣದಲ್ಲಿ ಒಂದು 'ಮ್ಯೂಜಿಯಂ' ಸ್ಥಾಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

**ಕೆಂಪು ಹೊಳೆ (ಎತ್ತಿನಹಳ್ಳ)**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೬೪ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೪ ಕಿ.ಮೀ



ಇದು ಸಾಮಾನ್ಯವಾಗಿ ಹಾನುಬಾಳಿನ ಎತ್ತಿನಹಳ್ಳ ದೇವಾಲಯದ ಕೆರೆ ಅಗನಿ ಸಮೀಪ ಹುಟ್ಟಿ, ಹಾರ್ಲೆ ಮುಖಾಂತರ ಹರಿದು ಕೆಂಚಗ ಕುಂಬ್ರಿ ರಕ್ಷಿ ತಾರಣ್ಯ ದಾಟಿ ಟಾಕ್ಕಡ್ ಹತ್ತಿರ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿಗೆ ಸೇರುತ್ತದೆ. ಇದು ಭತ್ತ ಮತ್ತು ಕಾಫಿ ಬೆಳೆಯುವವರಿಗೆ ಹೆಚ್ಚು ಉಪಯೋಗ ವಾಗಿದ್ದು, ಕೃಷಿಕರಿಗೆ ಸಂಜೀವಿನಿಯಾಗಿದೆ.

**ಹೊಳೆಮಲ್ಲೇಶ್ವರ ದೇವಸ್ಥಾನ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೧ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೧ ಕಿ.ಮೀ



ಸಕಲೇಶಪುರ ತಾ|| ವಲಳಲ್ಲಿ ಮಂಜಯ್ಯನೆಂಬ ಶಿವಭಕ್ತನು ಕಾಲ್ನಡಿಗೆಯಿಂದ ಕಾಶಿಗೆ ಹೋಗಿ, ಕಾಶಿ ವಿಶ್ವನಾಥನ ದರ್ಶನ ಪಡೆದು, ಆ ವಿಶ್ವನಾಥನ ಮೂರ್ತಿಯನ್ನು ಹೊಳೆಯ ದಡದಲ್ಲಿ ಮಲ್ಲೇಶ್ವರನನ್ನು ಸ್ಥಾಪಿಸಿದ್ದರಿಂದಲೂ, ಈ ದೇವರು ಹೊಳೆಯ ಅಂಚಿನಲ್ಲಿರುವುದೆಂದಲೂ ಈ ದೇವಾಲಯಕ್ಕೆ ಹೊಳೆಮಲ್ಲೇಶ್ವರ ದೇವಾಲಯವೆಂದು ಕರೆಯಲಾಯಿತು. ಮಂಜಯ್ಯನವರು ಕಾಶಿಗೆ ಹೋಗಿ ಬಂದ ಕಾಲ ೧೮೯೫. ಇಲ್ಲಿ ಒಂದು ಮಠವನ್ನು ಸ್ಥಾಪಿಸಿ, ಧರ್ಮಸ್ಥಳಕ್ಕೆ ಹೋಗಿಬರುತ್ತಿದ್ದ ಭಕ್ತಾದಿಗಳಿಗೆ ದಾಸೋಹವನ್ನು ಏರ್ಪಡಿಸಲಾಗಿತ್ತು. ನಂತರ ಎಲ್ಲವೂ ಶಿಥಿಲಗೊಂಡು ಕುರುಚಲು ಕಾಡಿನಿಂದ ತುಂಬಿಕೊಂಡಿತು. ನಂತರ ೧೯೮೩ ರಿಂದ ಅಭಿವೃದ್ಧಿಯಾಗುತ್ತಾ ಬಂದ ಈ ದೇವಾಲಯ ೨೦೦೧ರಲ್ಲಿ ಧೂಲ್‌ರಾಜ್ ಜೈನ್‌ರವರ ಅಧ್ಯಕ್ಷತೆಯಲ್ಲಿ ಸುಂದರವಾದ ಚಾಲುಕ್ಯ ಶೈಲಿಯ ದೇವಾಲಯವನ್ನು ಕಟ್ಟಲಾಯಿತು. ಮುಖಮಂಟಪದ ಮೇಲೆ ೧೮ ಅಡಿ ಎತ್ತರದ ಶಿವನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಪ್ರತೀ ವರ್ಷ ಅನ್ನಧಾನ, ಸಂಗೀತ ಕಛೇರಿ, ಶಿವಾರಾಧನೆ, ಪ್ರತಿಭಾಪ್ರಕಾಶನ ನಡೆಯುತ್ತಿವೆ ಮತ್ತು ಸಕಲೇಶಪುರಕ್ಕೆ ಆಕರ್ಷಕವಾದ ಸುಂದರಪರಿಸರದಲ್ಲಿರುವ ಈ ಹೊಳೇಮಲ್ಲೇಶ್ವರ ದೇವಾಲಯವು ಪ್ರಸಿದ್ಧ ಪ್ರವಾಸೀ ಕ್ಷೇತ್ರವಾಗಿದೆ.

**ಕನ್ನಿಕಾಪರಮೇಶ್ವರಿ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೧ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೦ ಕಿ.ಮೀ



ವೈಶ್ಯಧರ್ಮದ ಆರಾಧ್ಯ ದೈವವಾದ ಕನ್ನಿಕಾಪರಮೇಶ್ವರಿ ದೇವಾಲಯವು ಈ ಹಿಂದೆ ವಾಸವಿ ವಿದ್ಯಾ ವಿಹಾರದಲ್ಲಿತ್ತು. ೧೯೮೧ರಲ್ಲಿ ದಿ.ಹಾ.ಸು. ರಂಗಶೆಟ್ಟಿಯವರು ಅಶೋಕ ರಸ್ತೆಯಲ್ಲಿ ದೊಡ್ಡ ನಿವೇಶನವನ್ನು ಕೊಂಡು ಕನ್ನಿಕಾಪರಮೇಶ್ವರಿ ದೇವಾಲಯ ಸಮಾಜದವರೊಂದಿಗೆ ಸೇರಿ ಇಂದಿನ ಬೃಹತ್ತಾದ ಕನ್ನಿಕಾಪರಮೇಶ್ವರಿ ದೇವಾಸ್ಥಾನವನ್ನು ನಿರ್ಮಿಸಿದರು. ಈ ದೇವಸ್ಥಾನದಲ್ಲಿರುವ ಎಲ್ಲಾ ಅಂಗಗಳಲ್ಲಿಯೂ, ವಾಸ್ತುಕಲೆಯ ವೈಭವ ಎದ್ದು ಕಾಣುತ್ತದೆ. ಉದ್ಯುಕ್ತವಾಗಿ ಈ ದೇವಾಲಯ ೧೯೯೫ರಲ್ಲಿ

ಉದ್ಘಾಟನೆಯಾಯಿತು. ಈ ದೇವಸ್ಥಾನದಲ್ಲಿ ಕೈಸಾಲ, ರಾಜಗೋಪುರ, ಪ್ರಾರ್ಥನಾಲಯ, ಪಾಕಶಾಲೆಗಳನ್ನು ಹೊಂದಿದೆ. ಗರ್ಭಗೃಹವನ್ನು ವಿಶೇಷವಾದ ಶಿಲೆಯಿಂದ ಅಲಂಕರಿಸಲಾಗಿದೆ. ಗರ್ಭಗುಡಿಯಲ್ಲಿರುವ ಕನ್ನಿಕಾಪರಮೇಶ್ವರಿಯ ವಿಗ್ರಹವನ್ನು ಕೃಷ್ಣಶಿಲೆಯಲ್ಲಿ ಕಂಡಿರಿಸಿ ಹಸನ್ಮುಖಗೊಳಿಸಲಾಗಿದೆ. ಇದು ಗೋಪುರಗಳುಳ್ಳ ರಾಜಗೋಪುರವು ಬಹುದೂರದಿಂದಲೂ ಕಾಣುತ್ತಿದ್ದು ಕಲಾತ್ಮಕವಾಗಿದೆ. ದ್ವಾರ ಬಾಗಿಲಿನ ಎಡ-ಬಲದಲ್ಲಿರುವ ಸುಂದರ ಅಂಗ ಸೌಷ್ಟವದ ದ್ವಾರ ಪಾಲಿಕೆಯರು ಮತ್ತು ಗೋಪುರದ ಮೇಲು ಹಂತದಲ್ಲಿ ಕನ್ನಿಕಾಪರಮೇಶ್ವರಿಯ ಜೀವನಚರಿತ್ರೆಯನ್ನೊಂಡ ಭಿತ್ತಿಚಿತ್ರಗಳನ್ನು ಸಿಮೆಂಟಿನಲ್ಲಿ ರೂಪಿಸಲಾಗಿದೆ. ಈ ದೇವಾಲಯದಲ್ಲಿ ವೈಶ್ಯ ಜನಾಂಗದ ವೃತ್ತಿ ಲಾಂಛನಗಳು ವಿಶೇಷವಾದ ದರ್ಪಣ ಮಂದಿರಗಳು ಇದ್ದು, ಪ್ರತೀ ವರ್ಷ ಪೂಜೆ, ಹೋಮಾದಿಗಳು ನಡೆಯುತ್ತಿವೆ. ಇದೊಂದು ಸಕಲೇಶಪುರದ ವಿಶೇಷವಾದ ಸ್ಮಾರಕಗಳಲ್ಲಿ ಒಂದಾಗಿದೆ.

**ರಾಜೇಂದ್ರಪುರ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೮ ಕಿ.ಮೀ



೧೧ನೇ ಶತಮಾನದಿಂದ ಪ್ರಚಲಿತವಾಗಿರುವ ರಾಜೇಂದ್ರಪುರದಲ್ಲಿ ಚಂಗಾಳ್ವರಾಜ ರಾಜೇಂದ್ರ ಚೋಳನು ಇಲ್ಲಿಯ ಬಸವೇಶ್ವರ ದೇವಾಲಯವನ್ನು ನಿರ್ಮಿಸಿದ್ದಾನೆ. ಬನವಾಸಿಯಲ್ಲಿ ಆಳಿದ ಉತ್ತರ ಕದಂಬರ ಮೂಲಪುರುಷ ಚಾಮರಸನ ಬಗೆಗೆ ಬರೆದ ಮೂಲ ಶಾಸನವೊಂದು ದೇವಾಲಯದ ತೊಲೆಯಮೇಲಿದ್ದುದ್ದನ್ನು, ಈಗ ಹೊರಗಡೆ ಸ್ಥಾಪಿಸಲಾಗಿದೆ. ಐತಿಹಾಸಿಕವಾಗಿರುವ ರಾಜೇಂದ್ರಪುರದಲ್ಲಿ ಹೊಯ್ಸಳರಿಗೂ, ಕದಂಬರಸರಿಗೂ ಯುದ್ಧಗಳಾಗಿದೆ. ಇಲ್ಲಿ ಅಪೂರ್ವವಾದ ಬಸವೇಶ್ವರ ದೇವಸ್ಥಾನಕ್ಕೆ ಅಸಂಖ್ಯಾತ ಭಕ್ತರಿದ್ದಾರೆ. ಪ್ರತೀ ವರ್ಷವು ಏಪ್ರಿಲ್ ತಿಂಗಳಲ್ಲಿ ಜಾತ್ರೆಯು ನೆರವೇರುತ್ತಿದ್ದು, ಇತ್ತೀಚೆಗೆ ಈ ದೇವಸ್ಥಾನವನ್ನು ಕಲಾತ್ಮಕವಾಗಿ, ಸುಂದರವಾಗಿ ನಿರ್ಮಿಸಿದ್ದಾರೆ.

## ಹೊಳೇನರಸೀಪುರ ತಾಲ್ಲೂಕಿನ ಪ್ರಮುಖ ಸ್ಥಳಗಳು

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೧೮ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೮ ಕಿ.ಮೀ



**ಚಾಕೇನಹಳ್ಳಿ ಕಟ್ಟೆ :-**

ಚಾಕೇನಹಳ್ಳಿ ಕಟ್ಟೆ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ತಾಲ್ಲೂಕು ಕೇಂದ್ರವಾದ ಹೊಳೆನರಸೀಪುರಕ್ಕೆ ೧೮ ಕಿ.ಮೀ ಸಮಾನಾಂತರ ದೂರದಲ್ಲಿದೆ. ೧೯೫೭-೧೯೫೭ರಲ್ಲಿ ಶಂಕುಸ್ಥಾಪನೆಯಾದ ಈ ಕಟ್ಟೆ ೧೯೭೧ರಲ್ಲಿ ಜಮೀನುಗಳಿಗೆ ನೀರುಣಿಸತೊಡಗಿತು. ೫೫೦ ಎಕರೆ ವಿಸ್ತೀರ್ಣದಲ್ಲಿರುವ ಈ ಕಟ್ಟೆಗೆ ೧.೬ ಟಿ.ಎಂ.ಸಿ. ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಇದೆ. ೪೦ ಅಡಿಗಳ ಆಳ ೧೮೦ ಅಡಿಕಟ್ಟೆಯ ಏರಿಯಾದ ಉದ್ದವನ್ನು ಹೊಂದಿದ್ದು, ೯ ಬಾಗಿಲುಗಳನ್ನು ಹೊಂದಿದೆ. ಬಾಗಿಲುಗಳು ೨೦ x ೧೫ ಅಡಿ ಉದ್ದಗಲ ಹೊಂದಿದೆ. ಹಿನ್ನೀರು ೩ ಕಿ.ಮೀ ವ್ಯಾಪಿಸುತ್ತದೆ. ಎರಡೂ ಬದಿಗೆ ಎರಡು ನಾಲೆಗಳಿವೆ. ಇವನ್ನು ಎಡಬಲ ನಾಲೆಗಳೆನ್ನುವರು. ೨೮೦೦ ಎಕರೆಗೆ ಈ ನಾಲೆ ನೀರುಣಿಸುತ್ತದೆ. ಈ ಕಟ್ಟೆಯಲ್ಲಿ ಕಾಟ್ಲಾಕೋಹುಮ್ಮೃಗಾಲು ಗ್ರಾಸ್ ಕಾರ್ಪ, ಸಾಮಾನ್ಯ ಗೆಂಡೆ ಇತ್ಯಾದಿಯನ್ನು ಬೆಳೆಸಲಾಗಿದೆ. ೧೦ ಲಕ್ಷ ಮೀನು ಮರಿಗಳನ್ನು ಪ್ರತಿಂµ ಂಜ ಇಲ್ಲಿ ಬೆಳೆಸಲಾಗುತ್ತದೆ.

**ಮಳಲಿ ಮಾವನೂರು**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೧೮ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೨೩ ಕಿ.ಮೀ



ಈ ಊರುಗಳು ತಾಲ್ಲೂಕು ಕೇಂದ್ರವಾದ ಹೊಳೆನರಸೀಪುರ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ೧೮ ಕಿ.ಮೀ. ದೂರದಲ್ಲಿದೆ. ಮಳಲಿಯಲ್ಲಿ ಗ್ರಾಮದೇವತೆಯಾದ ಮಳಲಿಯಮ್ಮ ಪ್ರಖ್ಯಾತಿಯನ್ನು ಪಡೆದಿದ್ದಾಳೆ.

ಮಾವನೂರಿನಲ್ಲಿ ಮೂಗುಮಲ್ಲಪ್ಪನ ಬೆಟ್ಟವೂ ಊರೊಳಗೆ ಊರು ಮಲ್ಲಪ್ಪನ ದೇವಾಲಯವೂ ಇದೆ. ಇಲ್ಲಿ ವರ್ಷಕ್ಕೊಮ್ಮೆ ಓಡು ಮಲ್ಲಪ್ಪನ ಜಾತ್ರೆ ನಡೆಯುತ್ತದೆ. ಕರಗ ಅಥವಾ ಗುಂಬ ಹೊರುವುದು ಎನ್ನುವರು.

ಈ ಎರಡು ಗ್ರಾಮಗಳು ಸಾಂಸ್ಕೃತಿಕವಾಗಿ ವಿಭಿನ್ನವಾಗಿದೆ. ಮಳಲಿಯಲ್ಲಿ ಶಕ್ತಿ ದೇವತೆಯನ್ನು ಆರಾಧಿಸಿದರೆ, ಮಾವನೂರಿನಲ್ಲಿ ಶಿವನನ್ನು ಆರಾಧಿಸಲಾಗುತ್ತದೆ.

ಈ ಎರಡು ಗ್ರಾಮಗಳಲ್ಲಿ ಜಾನಪದವನ್ನು ಮೈಗೂಡಿಸಿಕೊಂಡಿವೆ. ಗ್ರಾಮದೇವತೆಯ ಹಾಡುಗಳು (ಸೋಬಾನೆ) ಕೋಲಾಟ ವಿಶಿಷ್ಟವಾದುದು ಜಂಪ್ ಕೋಲು, ಜಡೆಕೋಲು, ಕೊರವಂಜಿ ಕೋಲು ಇನ್ನೂ ಮೊದಲಾದ ಬಗೆಬಗೆಯ ಕೋಲಾಟ ಲಾವಣಿ ಪ್ರಖ್ಯಾತವಾದುದು.

ಇತ್ತೀಚಿಗೆ ಮಾವನೂರು ಮಲ್ಲಪ್ಪನ ಬೆಟ್ಟದಲ್ಲಿ ಪವನ ವಿದ್ಯುತ್ತನ್ನು ಉತ್ಪಾದನೆ ಮಾಡಲಾಗುತ್ತದೆ. ಈ ವಿದ್ಯುತ್ ಜಿಲ್ಲಾ ಕೇಂದ್ರವಾದ ಹಾಸನವನ್ನು ಬೆಳಗುತ್ತಿದೆ.

**ಶ್ರೀರಾಮ ದೇವರ ಕಟ್ಟೆ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೨೮ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೧೪ ಕಿ.ಮೀ



ತಾಲ್ಲೂಕು ಕೇಂದ್ರವಾದ ಹೊಳೆನರಸೀಪುರ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ಸುಮಾರು ೧೪ ಕಿ.ಮೀ. ದೂರದಲ್ಲಿದೆ. ಈ ಕಟ್ಟೆಯನ್ನು ೧೮೭೦ರಲ್ಲಿ ನಿರ್ಮಿಸಲಾಗಿದೆ. ಈ ಕಟ್ಟೆಗೆ ಎಡಬಲ ನಾಲೆಗಳಿವೆ. ಸುಮಾರು ೨೦,೦೦೦ ಎಕರೆಗೆ ನೀರಾವರಿ ಸೌಲಭ್ಯವಿದೆ. ದಪ್ಪ ದಪ್ಪ ಬಂಡೆಗಳನ್ನು ಸೀಳಿ ಡ್ಯಾಂ ನಿರ್ಮಿಸಲಾಗಿದೆ. ನೀರು ಕಲ್ಲುಗಳ ಸಂದಿಯಲ್ಲಿ ನುಸುಳಿ ಹೋಗದಿರಲೆಂದು ಗಾರೆಗಚ್ಚು ಬಳಸಲಾಗಿದೆ.

ಇತ್ತೀಚೆಗೆ ೨೦೦೦ನೇ ಇಸವಿಯಲ್ಲಿ ಜಲವಿದ್ಯುತ್ತನ್ನು ಕೂಡ ತಯಾರಿಸಲಾಗುತ್ತಿದೆ. ವಿದ್ಯುತ್ತನ್ನು ಹಾಸನ ನಗರದ ಅಭಿವೃದ್ಧಿಗೆ ಬಳಸಲಾಗುತ್ತದೆ.

**ಗುಂಜೇವು ಮಾರನಾಯಕನಹಳ್ಳಿ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೫೨ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೧೨ ಕಿ.ಮೀ



ಇಲ್ಲಿ ಪೂರ್ವಕ್ಕೆ ಹರಿಯುತ್ತಿದ್ದ ಹೇಮಾವತಿ ನದಿ ಪಶ್ಚಿಮಕ್ಕೆ ಹರಿಯುತ್ತದೆ ಇದನ್ನು ಸಹಜ ಪಶ್ಚಿಮವಾಹಿನಿ ಎನ್ನುವರು. ಹೊಳೆನರಸೀಪುರದ ನರಸಿಂಹನಾಯಕನ ಅಧೀನ ಪಾಳೆಯಗಾರನಾಗಿದ್ದ ಮಾರನಾಯಕನೆಂಬುವವನು ಈ ಸುತ್ತ ಹತ್ತಾರು ಗ್ರಾಮ ಗಳ ಪಾಳೆಯಗಾರನಾಗಿದ್ದ ಈತ ತುಂಬಾ ದರ್ಮಿಷ್ಟನಾಗಿದ್ದು ತನ್ನ ಪ್ರಜೆಗಳ ಅನುಕೂಲಕ್ಕಾಗಿ ಊರುಗಳನ್ನು ಕಟ್ಟಿಸಿದ. ದೇವಾಲಯಗಳನ್ನು ನಿರ್ಮಿಸಿದ. ಕೆರೆ ಕಟ್ಟೆಗಳನ್ನು ನಿರ್ಮಿಸಿದ.

ಇಲ್ಲಿ ಪ್ರಕೃತಿ ರಮ್ಯತಾಣವಿದೆ ಪಶ್ಚಿಮ ವಾಹಿನಿಯಲ್ಲಿ ಬ್ರಹ್ಮದೇವಾಲಯ ವಿಷ್ಣು ದೇವಾಲಯ, ಶಿವಾಲಯಗಳಿವೆ. ಚಾರಣ ಮಾಡುವವರಿಗೆ, ೧೭೫೦ ಅಡಿ ಎತ್ತರದ ಬೆಟ್ಟವಿದೆ. ದೇವರ ಹಿಂಬದಿಯಲ್ಲಿ ಬಾವಿ ಇದೆ. ಇಲ್ಲಿ ಒನಕೆ ಒಣೆದರೆ ಕವಡಳ್ಳಿ ಬೀರನಹಳ್ಳಿ ಹಳ್ಳದಲ್ಲಿ ಬರುತ್ತದೆ ಎಂಬ ನಂಬುಗೆ ಇದೆ. ಗುಜಾಲಕ್ಷ್ಮೀನರಸಿಂಹಸ್ವಾಮಿಯ ಜಾತ್ರೆ ಪ್ರಖ್ಯಾತವಾದುದು.

ಮಾರನಾಯಕ ಕಟ್ಟಿಸಿರುವ ಡ್ಯಾಮುಗಳ ನೋಡುಗರಿಗೆ ಅಚ್ಚರಿಯನ್ನು ಉಂಟು ಮಾಡುತ್ತದೆ. ''ಗಾಣದಹಳ್ಳಿ ಕಟ್ಟೆ'' ಸೋಮನಹಳ್ಳಿ ಕಟ್ಟೆ, ಇವು ವಿಶಿಃಂಔವಾಗಿ ನಿರ್ಮಿಸಲ್ಪಟ್ಟಿವೆ. ಗುಂಜೇವು ಬೆಟ್ಟದಲ್ಲಿ ಭಾರಿಗಾತ್ರದ ಚಪ್ಪಡಿಗಳನ್ನು ಸೀಳಿ ಗಾರೆಗಚ್ಚು ಬಳಸದೆ ಮರಗಳನ್ನು

ಜಾಯಿಂಟ್ ಮಾಡುವ ಹಾಗೆ ಕಲ್ಲುಗಳನ್ನು ಜಾಯಿಂಟ್ ಮಾಡಿ ನೀರು ಸೋರದ ಹಾಗೆ ಸೀಸವನ್ನು ತುಂಬಿ ಕಟ್ಟೆಯನ್ನು ನಿರ್ಮಿಸಲಾಗಿದೆ. ಬಹುಷಃ ಕಾಲ ನೀರುಣಿಸಿದ ಈ ಕಟ್ಟೆಗಳು ೧೯೬೨ರಲ್ಲಿ ಬಂದ ಭಾರಿ ಪ್ರವಾಹದಿಂದಾಗಿ ಭಗ್ನಗೊಂಡು ಅವಶೇಷಗಳು ಉಳಿದಿವೆ.

**ಸಸ್ಯಕ್ಷೇತ್ರ ಗನ್ನಿಕಡ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೨ ಕಿ.ಮೀ



ಇದು ಚನ್ನರಾಯಪಟ್ಟಣ ಹಾಗೂ ಹೊಳೆನರಸೀಪುರ ತಾಲ್ಲೂಕುಗಳಿಗೆ ಸಮಾನಾಂತರ ದೂರದಲ್ಲಿದೆ. ೧೨ ಕಿ.ಮೀ ಹೊಳೆನರಸೀಪುರ ತಾಲ್ಲೂಕು ಭಾಗಕ್ಕೆ ಸೇರುವ ಸಸ್ಯಕ್ಷೇತ್ರವನ್ನು ಗನ್ನಿಕಡ ಸೋಷಿಯಲ್ ಫಾರೆಸ್ಟ್‌ಅಂತಲೂ, ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರಿರುವ ಭಾಗಕ್ಕೆ ರೆಗ್ಯುಲರ್ ಫಾರೆಸ್ಟ್ ಅಂತಲೂ ಕರೆಯುತ್ತಾರೆ. ಈ ಭಾಗವನ್ನು ಸೇರಿಸಲು ನದಿಗೆ ಎರಡು ಜೋಡಿ ಸೇತುವೆಗಳಿವೆ. ಇದು ಹೊಳೆನರಸೀಪುರ ಚನ್ನರಾಯಪಟ್ಟಣ ರಸ್ತೆಯಲ್ಲಿದೆ. ಈ ಸಸ್ಯ ಕ್ಷೇತ್ರಗಳಲ್ಲಿ, ತೇಗ, ಬೀಟೆ, ಸಿಲ್ವರ್ ಹೊನ್ನೆ ಹಲಸು, ಹುಣಸೆ, ಬೇವು ಮಾವು ಸಂಪಿಗೆ ಹೊಂಗೆ ಚೆರ್ರಿ ನೇರಳೆ ಗಸಗಸೆ ಅಕೇಶಿಯಾ ಗಂಧ ಅಶೋಕ ಗೋಲ್ಡ್‌ಮಾರ್, ರೈನ್ ಟ್ರೀ, ನೀಲಗಿರಿ ಬಸರಿ, ಆಲ, ಗೋಳಿ, ಸಪೋಟ, ಕರಿಬೇವು, ನುಗ್ಗೆ ಕಾಯಿ, ಬಸವನಪಾದ, ಅರಳಿ ಟಾಕಂ, ಬಿದಿರು ಅತ್ತಿ ಅರಳೆ, ಕಾಚೆ, ಕಳ್ಳಿ, ಪೆತ್ರೋಡಿಯಾ ಬಾಗೆ ತಬಸಿ ಇನ್ನೂ ಮೊದಲಾದ ಸಸ್ಯಗಳನ್ನು ಬೆಳೆಸಿ ರೈತರಿಗೆ ಸರ್ಕಾರಿ ಇಲಾಖೆಗೆ ನೀಡಲಾಗುತ್ತದೆ.

**ಮಾವಿನ ಕೆರೆ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೨೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೦ ಕಿ.ಮೀ



ಇದು ಜಿಲ್ಲಾ ಕೇಂದ್ರವಾದ ಹಾಸನಕ್ಕೆ ತಾಲ್ಲೂಕು ಕೇಂದ್ರವಾದ ಹೊಳೆನರಸೀಪುರಕ್ಕೆ ಸುಮಾರು ೧೪ ಕಿ.ಮೀ. ದೂರದಲ್ಲಿದೆ. ಇಲ್ಲಿ ರಂಗನಾಥಸ್ವಾಮಿ ಬೆಟ್ಟವಿದ್ದು ಅಲ್ಲಿ ರಂಗನಾಥಸ್ವಾಮಿಯ ದೇವಾಲಯವಿದೆ. ಬೆಟ್ಟ ಹತ್ತಿದ್ದರೆ, ಪ್ರಕೃತಿಯ ರಮ್ಯ ತಾಣ ಸವಿಯಬಹುದಾಗಿದೆ.

ಇಲ್ಲಿ ಹೇಮಾವತಿ ನದಿ ಎಡದಡೆನಾಲೆಗೆ ಮೇಲ್ಸೇತುವೆಯನ್ನು ನಿರ್ಮಿಸಲಾಗಿದೆ. ಇಲ್ಲಿ ಎರಡು ಮೇಲ್ಸೇತುವೆಗಳಿದ್ದು, ೧ ಕಿ.ಮೀ. ಉದ್ದದ ಈ ಸೇತುವೆಯಲ್ಲಿ ನೀರು ಹರಿಯುವ ರಭಸವನ್ನು ನೋಡಲು ಕಣ್ಣು ಸಾಲವು.

ಇಲ್ಲಿನ ಅತಿ ವಿಶಿಷ್ಟತೆ ಎಂದರೆ ''ರಾಜೀವಗಾಂಧೀ ನವೋದಯ ಶಾಲೆ'' ಇದೆ. ಗ್ರಾಮಾಂತರ ಪ್ರತಿಭೆಗಳನ್ನು ಬೆಳೆಸುತ್ತಿರುವ ಈ ಜ್ಞಾನದೇಗುಲ ಜಿಲ್ಲೆಗೆ ಒಂದೇ ಇರುವುದು ಇದು ಇಲ್ಲಿನ ವಿಶೇಷ.

**ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೫ ಕಿ.ಮೀ



ಹಾಸನ ಜಿಲ್ಲೆಯ ಜೀವನದಿ ಎನಿಸಿರುವ ಹೇಮಾವತಿ ತಟದಲ್ಲಿ ಕಂಗೊಳಿಸುವ ಪಟ್ಟಣ ಸಿರಿಯನ್ನು ಹೊಂದಿದ ಹೊಳೇನರಸೀಪುರದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಭಕ್ತರ ಆಕರ್ಷಣೆಯ ಕೇಂದ್ರಬಿಂದು.

ವಶಿಷ್ಟ ಮಹಾ ಋಷಿಗಳ ತಪೋಸಿದ್ಧಿಗೆ ಒಲಿದ ವಿಷ್ಣುವಿನ ಅವತಾರಗಳಲ್ಲಿ ಒಂದಾದ ಶ್ರೀ ಲಕ್ಷ್ಮೀ ಸಮೇತ ನರಸಿಂಹಸ್ವಾಮಿಯ ಆರಾಧನೆಗೆಂದೇ ಸ್ಥಾಪಿತವಾದ ಅಂಗರಕಡ್ಡಿ ಮಂಟಪವೇ ದೇವಾಲಯದ ಮೂಲ ಎನ್ನುವ ಐತಿಹಾಸಿಕ ಹಿನ್ನಲೆ ಇಲ್ಲಿನದು. ಹೇಮಾವತಿ ಹೊಳೆ ಹರಿಯುತ್ತಿರುವ ಮತ್ತು ನೃಸಿಂಹ ದೇವಾಲಯದ ಸಂಗಮ ಕ್ಷೇತ್ರವಾದ್ದರಿಂದ ಹೊಳೆನರಸೀಪುರಎಂಬ ಹೆಸರಿನಿಂದ ಪ್ರಚಲಿತವಾಗಿದೆ.

೧೦೦೫ ರ ಸುಮಾರಿಗೆ ಇಲ್ಲಿ ಹೊಯ್ಸಳ ಸಾಮ್ರಾಜ್ಯದ ಸಾಮಂತ ನರಸಿಂಹನಾಯಕ ಎಂಬ ಪಾಳೇಗಾರನ ಆಳ್ವಿಕೆ ಕಾಲದಲ್ಲಿ ನಿರ್ಮಾಣಕಂಡಿದೆ. ೧೧೬೭ ರಲ್ಲಿ ಪ್ರಜಾರಕ್ಷಣೆಯ ಉದ್ದೇಶದಿಂದ ಕೋಟೆ ನಿರ್ಮಾಣ ಕಂಡಿದ್ದು, ನಂತರ ೧೧೯೯ ರಲ್ಲಿ ಹೊಯ್ಸಳ ದೊರೆಗಳ ಪೈಕಿ ೩ ನೇ ನರಸಿಂಹನು ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಅಭಿವೃದ್ಧಿಗೊಳಿಸುವ ಹಿನ್ನಲೆಯಲ್ಲಿ ಮೂರು ಪ್ರತ್ಯೇಕ ಗರ್ಭಗುಡಿಯನ್ನು ಸ್ಥಾಪಿಸಿ ಉತ್ತರಾಭಿಮುಖವಾಗಿ ಶ್ರೀಮನ್ನಾರಾಯಣಸ್ವಾಮಿ, ಉತ್ತರಾಭಿಮುಖವಾಗಿ ಶ್ರೀವೇಣುಗೋಪಾಲಸ್ವಾಮಿ ಹಾಗೂ ಪಶ್ಚಿಮಾಭಿಮುಖವಾಗಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದನು. ಇದರಿಂದಾಗಿಯೇ ಮೂರು ದೇವರುಗಳ ತ್ರಿಕೂಟಾಚಲ ಸನ್ನಿದಿ ಎಂಬ ಹಿರಿಮೆಗೆ ಪಾತ್ರವಾದದ್ದು. ಹೊಯ್ಸಳ ಸಾಮ್ರಾಜ್ಯದ ಫತನದ ನಂತರ ಆಳ್ವಿಕೆಗೆ ಬಂದ ವಿಜಯನಗರ ಅರಸರ ಆಸ್ಥಾನದ ಮಹಾಮಂತ್ರಿ ಮಲ್ಲರಸ ೧೪೩೮ ರಲ್ಲಿ ದೇವಾಲಯದ ಮುಖ್ಯ ದ್ವಾರದಲ್ಲಿ ವಿಮಾನಗೋಪುರ ಹಾಗೂ ಗರ್ಭಗುಡಿಗಳ ಮೇಲ್ಭಾಗದಲ್ಲಿ ರಜಗೋಪುರಗಳನ್ನು ಕಟ್ಟಿಸಿ ದೇವಾಲಯದ ಆಕರ್ಷಣೆ ಮೆರೆದಿತು.

# ಚನ್ನರಾಯಪಟ್ಟಣ ತಾಲ್ಲೂಕು






ಚನ್ನರಾಯಪಟ್ಟಣದಲ್ಲಿ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ೪೦ಕಿ.ಮೀ ದೂರದಲ್ಲಿದೆ. ಈ ನಗರವನ್ನು ಕೊಳತ್ತೂರ, ಅಮೃತನಾಥ ಪುರ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಚನ್ನಿಗರಾಯನ ಆಳ್ವಿಕೆಯ ನಂತರ ಈ ಊರನ್ನು ಚನ್ನರಾಯಪಟ್ಟಣವೆಂದು ಕರೆಯಲಾಗಿದೆ.

ಊರ ಪೂರ್ವಭಾಗದಲ್ಲಿ ಅಮಾನಿ ಕೆರೆ ಇದ್ದು, ಇದು ಜನರ ಜೀವನವನ್ನು ಹಸನುಗೊಳಿಸಿದೆ. ಗ್ರಾಮದಲ್ಲಿ ಚಂದ್ರಮೌಳೇಶ್ವರ ದೇವಾಲಯ ಚನ್ನಕೇಶವಸ್ವಾಮಿ ದೇವಾಲಯ, ಗಣಪತಿ ದೇವಾಲಯ, ಕಾಳಿಕಾಂಬಾ ದೇವಾಲಯ ಗದ್ದೇರಾಮೇಶ್ವರ ದೇವಾಲಯಗಳಿವೆ. ಊರಿಗೆ ೬ಕಿ.ಮೀ ದೂರದಲ್ಲಿ ಹೇಮಾವತಿ ಸಕ್ಕರೆ ಕಾರ್ಖಾನೆಯೂ, ಊರಿಂದ ಪೂರ್ವಕ್ಕೆ ಶೆಟ್ಟಿಹಳ್ಳಿ ಗ್ರಾಮದ ಹತ್ತಿರ, ಆಧುನಿಕ ಕೆ.ಎಂ.ಎಫ್ ಈ ಘಟಕವೂ ಇದೆ.

**ಶ್ರವಣ ಬೆಳಗೊಳ:-**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೪ ಕಿ.ಮೀ



ತಾಲ್ಲೂಕು ಕೇಂದ್ರವಾದ ಚನ್ನರಾಯಪಟ್ಟಣಕ್ಕೆ ೧೪ ಕಿ.ಮೀ ಜಿಲ್ಲಾ ಕೇಂದ್ರವಾದ ಹಾಸನಕ್ಕೆ ೫೨ ಕಿ.ಮೀ ದೂರದಲ್ಲಿದೆ. ಇಲ್ಲಿ ಜಗದ್ವಿಖ್ಯಾತ ಗೊಮ್ಮಟೇಶ್ವರನ ಭವ್ಯ ಮೂರ್ತಿ ಇಂದ್ರಗಿರಿ ಬೆಟ್ಟದ ಮೇಲೆ ಶಾಂತವಾಗಿ ನಿಂತಿದೆ. ಇದು ಏಕ ಶಿಲಾ ವಿಗ್ರಹ ೫೭ ಅಡಿ ಎತ್ತರವಿದೆ.

ಈ ಊರಲ್ಲಿ ಎರಡು ಬೆಟ್ಟಗಳಿವೆ. ೧. ಇಂದ್ರಗಿರಿ, ೨. ಚಂದ್ರಗಿರಿ. ಇಂದ್ರಗಿರಿಯ ಬೆಟ್ಟದಲ್ಲಿ ಗೊಮ್ಮಟೇಶ್ವರ ಮೂರ್ತಿ ಇದ್ದರೆ, ಚಂದ್ರಗಿರಿಯ ಬೆಟ್ಟದ ಮೇಲೆ ಅನೇಕ ಬಸದಿಗಳಿವೆ.

ಊರೊಳಗೆ ಜೈನರ ಧರ್ಮಶಾಲೆಯೂ, ಶ್ರೀ ಮಠವೂ ಇದೆ, ಇಲ್ಲಿ ಚಾರು ಕೀರ್ತಿ ಭಟ್ಟಾರಕಸ್ವಾಮಿಜಿಯವರ ವಾಸ್ತವ್ಯ ಇದೆ. ಅನೇಕ ಜೈನಮುನಿಗಳೂ ಯತಿಗಳೂ ಇಲ್ಲಿ ನೆಲೆನಿಂತಿದ್ದಾರೆ. ದಿಗಂಬರ ಜೈನ ಮಹಾಮುನಿಗಳ ನೆಲೆವೀಡು ಈ ಗೊಮ್ಮಟನ ನಾಡು.

ಬೆಟ್ಟದ ಮೇಲೆ ನಿಂತು ನೋಡಿದರೆ, ಬಹು ದೂರದವರೆಗಿನ ರಮ್ಯನೋಟ ನೋಡುಗರನ್ನು ಮನಸೂರೆಗೊಳ್ಳುತ್ತದೆ. ಗಂಗರ ಮಂತ್ರಿಯಾಗಿದ್ದ ಚಾವುಂಡರಾಯ ಕೆತ್ತಿಸಿದ ಈ ಶಿಲ್ಪವನ್ನು ಅರಿಷ್ಟನೇಮಿ ಎಂಬ ಶಿಲ್ಪಿ ನಿರ್ಮಿಸಿದ.

**ಆನೆಕೆರೆ ರಥೋತ್ಸವ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೫ ಕಿ.ಮೀ



ಕಿ.ಮೀ ದೂರದಲ್ಲಿದೆ. ಹಾಸನ – ಚನ್ನರಾಯಪಟ್ಟಣ ಕಾರೇಕೆರೆ ಮಾರ್ಗವಾಗಿ ಈ ಗ್ರಾಮವನ್ನು ತಲುಪಬಹುದು.

ಈ ಗ್ರಾಮದ ಗ್ರಾಮ ದೇವತೆ ಆನೆಕೆರೆ ಅಮ್ಮ ಯುಗಾದಿ ಕಳೆದ ಎರಡನೆಯ ಮಂಗಳವಾರ ಬುಧವಾರ ಗ್ರಾಮದೇವತೆಯ ಬೃಹತ್ ಜಾತ್ರೆ ನಡೆಯುತ್ತದೆ. ಮೂರು ರಥಗಳು, ಐದು ಬಂಡಿಗಳು ಈ ರಥೋತ್ಸವದಲ್ಲಿ ಭಾಗವಹಿಸುತ್ತವೆ. ಚೋಮನ ಕುಣಿತ, ಭೂತನ ಕುಣಿತ ವೀರ ಭದ್ರ ಕುಣಿತ ಖ್ಯಾತವಾದವುಕೊಂಡ ಹಾಯುವಿಕೆ, ಬಾಯಿಬೀಗ, ಸೋಬಾನೆ ಪದ, ರಂಗದಪದ, ಕೋಲಾಟ ಈ ಗ್ರಾಮದ ಕಲೆಗಳು.

ಈ ಗ್ರಾಮ ಮೂರು ಕೆರೆಗಳನ್ನು ಹೊಂದಿದೆ. ಐದು ಶಿವಾಲಯಗಳೂ ಒಂದು ಚನ್ನಕೇಶವ ದೇವಾಲಯವೂ ಗ್ರಾಮದೇವತೆ, ವೀರಭದ್ರದೇವರ ದೇವಾಲಯಗಳಿವೆ.

ಈ ಊರಿಗೆ ಅನಗನ ಕೆರೆ ಕೇಶವಪುರ ಎಂಬುದಾಗಿ ಕರೆಯಲಾಗುತ್ತಿತ್ತು. ಜನ್ನನ ಕಾವ್ಯದಲ್ಲಿ ಈ ಊರಿನ ಪ್ರಸ್ಥಾಪ ಬರುತ್ತದೆ. ಕ್ರಿ.ಶ. ೧೧೧೩ರಲ್ಲಿ ಚನ್ನಕೇಶವ ದೇವಾಲಯವನ್ನು ಕಟ್ಟಲಾಗಿದೆ.

ಜೀರ್ಣಾವಸ್ಥೆಯತ್ತ ವಾಲುತ್ತಿದ್ದ ಈ ದೇವಾಲಯವನ್ನು ಸುಮಾರು ೨೦ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರಹೆಗ್ಗಡೆಯವರು ಜೀರ್ಣೋದ್ಧಾರ ಮಾಡಿದ್ದಾರೆ.

**ನುಗ್ಗೇಹಳ್ಳಿ ಸೋಮನಾಥ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೬೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೦ ಕಿ.ಮೀ



ಚನ್ನರಾಯಪಟ್ಟಣ ತಾಲ್ಲೂಕಿನ ಹೋಬಳಿ ಕೇಂದ್ರ ಇದು ಚನ್ನರಾಯಪಟ್ಟಣಕ್ಕೆ ಸುಮಾರು ೨೦ಕಿ.ಮೀ ಹಾಸನಕ್ಕೆ ೬೦ ಕಿ.ಮೀ ದೂರದಲ್ಲಿದೆ. ಚನ್ನರಾಯಪಟ್ಟಣ ತಿಪಟೂರು ರಸ್ತೆಯಲ್ಲಿ ಈ ಗ್ರಾಮ ಬರುತ್ತದೆ.

ಈ ಗ್ರಾಮವನ್ನು ಹಿಂದೆ ವಿಜಯ ಸೋಮನಾಥಪುರ ಎಂದು ಕರೆಯಲಾಗುತ್ತಿತ್ತು. ವೀರ ಸೋಮೇಶ್ವರನ ದಂಡನಾಯಕನಾದ ಬೊಮ್ಮಣ್ಣ

ದಂಡನಾಯಕ ಜಯಗೊಂಡೇಶ್ವರ ದೇವಾಲಯವನ್ನು ನಿರ್ಮಿಸಿದ. ಇದು ಚೋಳರ ಕಾಲದ ನಿರ್ಮಾಣ.

ಪ್ರಖ್ಯಾತ ವಿಜಯ ಸೋಮನಾಥಪುರ ಅಗ್ರಹಾರವಾಗಿತ್ತು. ೧೨೪೬ರಲ್ಲಿ ಲಕ್ಷ್ಮೀ ನರಸಿಂಹ ದೇವಾಲಯ ನಿರ್ಮಾಣವಾಯಿತು. ಸದಾಶಿವ ದೇವಾಲಯವನ್ನು ೧೨೪೯ರಲ್ಲಿ ನಿರ್ಮಿಸಲಾಯಿತು. ಇಲ್ಲಿ ಚೋಳ ಮತ್ತು ಹೊಯ್ಸಳ ಸಂಪ್ರದಾಯದ ಕಲಾವೈಭವವನ್ನು ಕಾಣಬಹುದಾಗಿದೆ.  ನುಗ್ಗೇಹಳ್ಳಿಗೆ ೨ ಕಿ.ಮೀ ದೂರದಲ್ಲಿ ಜಂಬೂರು ಕ್ರೋಮೈಟ್ ಗಣಿ ೫ ಕಿ.ಮೀ ದೂರದಲ್ಲಿ ತಗಡೂರು ಗಣಿಗಳಿವೆ.

**ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ :**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೫೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೭ ಕಿ.ಮೀ



ಇದು ತಾಲ್ಲೂಕು ಕೇಂದ್ರವಾದ ಚನ್ನರಾಯಪಟ್ಟಣಕ್ಕೆ ಸುಮಾರು ೭ ಕಿ.ಮೀ ದೂರದಲ್ಲಿ ಹೊಳೆನರಸೀಪುರ ಚನ್ನರಾಯಪಟ್ಟಣ ರಸ್ತೆಯಲ್ಲಿದೆ.

ಈ ಕಾರ್ಖಾನೆಗೆ ೧೯೭೫ರಲ್ಲಿ ಶಂಕು ಸ್ಥಾಪನೆ ನೆರವೇರಿಸಿ ೧೯೮೪ರಲ್ಲಿ ಕಬ್ಬು ಅರೆಯುವಿಕೆಯನ್ನು ಪ್ರಾರಂಭಿಸಿತು. ದಿನನಿತ್ಯ ೧೪೦೦ ಟನ್ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿರುವ ಈ ಕಾರ್ಖಾನೆ ಚನ್ನರಾಯಪಟ್ಟಣ, ಹೊಳೆನರಸೀಪುರ, ಕೆ.ಆರ್.ಪೇಟೆಯ ಜೀವನಾಡಿಯಾಗಿದೆ.

೧೫೦ ಎಕರೆ ಪ್ರದೇಶ ಹೊಂದಿರುವ ಈ ಕಾರ್ಖಾನೆ ೨೦ ಎಕರೆ ಪ್ರದೇಶದಲ್ಲಿ ಇದೆ. ೬೦೦ಜನ ಕಾರ್ಮಿಕರಿದ್ದಾರೆ. ೩೦,೦೦೦ ಷೇರುದಾರರನ್ನು ಹೊಂದಿರುವ ಈ ಕಾರ್ಖಾನೆ ಪರೋಕ್ಷವಾಗಿ ಲಕ್ಷಾಂತರ ಕುಟುಂಬಗಳ ಜೀವನ ನಿರ್ವಹಣೆಗೆ ಸಹಕಾರಿಯಾಗಿದೆ.

**ನಾಗರ ನವಿಲೆ– ದೇವಸ್ಥಾನ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೬೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೩೦ ಕಿ.ಮೀ



ತಾಲ್ಲೂಕು ಕೇಂದ್ರವಾದ ಚನ್ನರಾಯಪಟ್ಟಣಕ್ಕೆ ೩೦ ಕಿ.ಮೀ ದೂರವಿರುವ ಈ ಗ್ರಾಮ ನಾಗಲಿಂಗೇಶ್ವರ ದೇವಾಲಯವನ್ನು ಹೊಂದಿದೆ. ಈ ಗ್ರಾಮಕ್ಕೆ ನಾಗರ ನವಿಲೆ ಎಂದು ಹೆಸರು ಬರಲು ಕಾರಣ ನವಿಲೊಂದು ನಾಗನಿಗೆ ಆಶ್ರಯ ನೀಡಿದ್ದರಿಂದ ಈ ಹೆಸರು ಬಂತೆಂದು ಸ್ಥಳ ಪುರಾಣ ಹೇಳುತ್ತದೆ.

**ನವಿಲೆ ಬಾಗೂರು ಸುರಂಗ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೫೭ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೧೨ ಕಿ.ಮೀ

ಚನ್ನರಾಯ ಪಟ್ಟಣಕ್ಕೆ ೧೨ ಕಿ.ಮೀ. ದೂರದಲ್ಲಿ ಬಾಗೂರು ಗ್ರಾಮವಿದೆ. ಈ ಬಾಗೂರಿನಿಂದ ೧ ಕಿ.ಮೀ. ದೂರದಲ್ಲಿ ಹೇಮಾವತಿ ಎಡದಂಡೆ ನೀರು ಸುರಂಗವನ್ನು ಪ್ರವೇಶಿಸುತ್ತದೆ. ನೀರು ಸುರಂಗದಲ್ಲಿ ಹರಿದು ನಾಗರ ನವಿಲೆಯ ಹತ್ತಿರ ಹೊರಬಂದು ತುಮಕೂರು ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ಸುರಂಗಮಾರ್ಗದಿಂದ ಸುಮಾರು ೮ ಕಿ.ಮೀ. ಸುರಂಗದಲ್ಲಿ ನೀರು ಸರಾಗವಾಗಿ ಹರಿಯುತ್ತಿದೆಯೆ ಇಲ್ಲವೆ ಎಂಬುದನ್ನು ಪರೀಕ್ಷಿಸಲು ಏಳು ಜಾಗಗಳಲ್ಲಿ ಸುರಂಗ ಮಾರ್ಗಕ್ಕೆ ಬಾವಿ ತೋಡಲಾಗಿದೆ. ಈ ಬಾವಿ ಸುರಂಗಕ್ಕೆ ಕೊಂಡಿಯಂತಿದ್ದು ಸಾವಿರಾರು ಅಡಿ ಆಳವಾಗಿರುತ್ತದೆ. ಇದಕ್ಕೆ ರಕ್ಷಣಾತ್ಮಕವಾಗಿ ದಪ್ಪ ದಪ್ಪ ಕಬ್ಬಿಣದ ಸರಳನ್ನು ಜೋಡಿಸಲಾಗಿದೆ. ಸುರಂಗವನ್ನು ಈ ಬಾವಿಯ ಮೂಲಕ ನೋಡಬಹುದು. ಇದು ರುದ್ರರಮಣೀಯ ದೃಶ್ಯ.

**ಚಿಕ್ಕೋನಹಳ್ಳಿ ಗುಡ್ಡ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೬೨ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೨೬ ಕಿ.ಮೀ

ತಗಡೂರು ಮೈನ್ಸ್, ಚಿಕ್ಕೋನಹಳ್ಳಿ ಮೈನ್ಸ್ ಎಂದು ಕರೆಯುವ ಈ ಜಾಗ ನುಗ್ಗೆ ಹಳ್ಳಿಗೆ ೮ ಕಿ.ಮೀ. ನವಿಲೆಗೆ ೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಗಣಿಗಾರಿಕೆ ನಡೆಯುತ್ತದೆ. ಸುಂದರವಾದ ಕಾಡಿದೆ.

ಗುಡ್ಡವನ್ನು ಹತ್ತಿದರೆ ರಂಗನಾಥನ ದೇವಾಲಯವಿದೆ. ಇಲ್ಲಿ ಒಂದು ಗುಂಡುಕಲ್ಲಿದೆ ಈ ಕಲ್ಲು ನಿಶ್ಚಲವಾಗಿ ಬಿದ್ದಿದೆ. ಯಾರಾದರೂ ಈ ಕಲ್ಲಿನ ಮೇಲೆ ಹತ್ತಿ ಕುಳಿತರೆ ಅದು ಗಿರರ ಹೊಡೆಯುತ್ತ ಸುತ್ತುತ್ತದೆ. ಜನ ತಮ್ಮ ಅಭೀಷ್ಟೆಯನ್ನು ನೆನೆದು ಈ ಕಲ್ಲಿನಲ್ಲಿಕುಳಿತು ತಮ್ಮ ಇಷ್ಟಾರ್ಥ ನೆರವೇರುವುದೆಂದು ನಂಬುತ್ತಾರೆ.

**ಕಬ್ಬಳಿ ಬಸವೇಶ್ವರ**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೬೫ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೨೮ ಕಿ.ಮೀ



ಇಲ್ಲಿ ಕಾರ್ತಿಕಮಾಸದಲ್ಲಿ ವಿಶೇಷ ಪೂಜೆ ನೆರವೇರುತ್ತದೆ. ಪ್ರತಿ ಸೋಮವಾರ ಭಕ್ತರು ಇಲ್ಲಿ ವಿಶೇಷವಾಗಿ ನೆರೆಯುತ್ತಾರೆ. ಕಾರ್ತಿಕ ಮಾಸದಲ್ಲಿ ಜಾತ್ರೆ ಕೂಡ ನಡೆಯುತ್ತದೆ. ಇಲ್ಲಿನ ದನಗಳ ಜಾತ್ರೆ ವಿಶೇಷವಾದುದು. ಕಬ್ಬಳಿ ಬಾಗೂರು ಮತ್ತು ನುಗ್ಗೇಹಳ್ಳಿ ಹಾಗೂ ಹಿರಿಸಾವೆಗಳಿಗೆ ೧೫ ಕಿ.ಮೀ. ಅಂತರದಲ್ಲಿದೆ.

ಇಲ್ಲಿ ಸುಂದರವಾದ ಕೊಳವಿದೆ. ಶ್ರೀ ಆದಿಚುಂದನಗಿರಿ ಮಹಾಸಂಸ್ಥಾನ ಮಠದವರು ಶಾಲೆಯನ್ನು ನಡೆಸುತ್ತಿದ್ದಾರೆ. ಬಸವೇಶ್ವರ ಸ್ವಾಮಿಯ ದೇವಾಲಯದ ಆವರಣ ತುಂಬಾ ಶುಭ್ರವಾಗಿ ಶುಚಿತ್ವವನ್ನು ಕಾಪಾಡಿದೆ.

ಇಲ್ಲಿ ಸುಂದರವಾದ ಬಸವನ ಮೂರ್ತಿಯಿದೆ. ಇಲ್ಲಿಂದ ಯಾರೂ ಒಂದು ಚಿಕ್ಕ ಕಲ್ಲನ್ನಾಗಲಿ ಹುಲ್ಲು ಕಡ್ಡಿಯನ್ನಾಗಲಿ ಬೇರೆಡೆ ಕೊಂಡೊಯ್ಯುವುದಿಲ್ಲ. ಹಾಸನ ತಾಲ್ಲೂಕಿನ ಪ್ರಮುಖ ಸ್ಥಳಗಳು.

**ಉಪಗ್ರಹ ನಿಯಂತ್ರಣ ವ್ಯವಸ್ಥೆ (ಎಂ.ಸಿ.ಎಫ್.)**

ಹಾಸನ ತಾಲ್ಲೂಕಿನ ಸಾಲಗಾಮೆಯ ಬಳಿ ಹಳೇಬೀಡು ರಸ್ತೆಯಲ್ಲಿರುವ ಉಪಗ್ರಹ ನಿಯಂತ್ರಣ (ಒಅಈ) ಕೇಂದ್ರವು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಯಿಂದ ಕರ್ನಾಟಕ ರಾಜ್ಯದ ಹಾಸನದಲ್ಲಿ ಸ್ಥಾಪಿಸಲ್ಪಟ್ಟಿತು. ೧೯೮೨ರಲ್ಲಿ ಆರಂಭವಾದ ಉಪಗ್ರಹ ನಿಯಂತ್ರಣ ಕೇಂದ್ರವು ಇಸ್ರೋದಿಂದ ಉಡಾವಣೆಯಾದ ಉಪಗ್ರಹಗಳ ಉಸ್ತುವಾರಿ ನೋಡಿಕೊಳ್ಳುವುದು ಮತ್ತು ಉಪಗ್ರಹಗಳನ್ನು ನಿಯಂತ್ರಿಸುವ ಜವಬ್ದಾರಿಯನ್ನು ನಿರ್ವಹಿಸುತ್ತಿದೆ. ಮಧ್ಯಪ್ರದೇಶದ ಭೂಪಾಲದಲ್ಲಿ ೨೦೦೫ರಲ್ಲಿ ಇನ್ನೊಂದು ಉಪಗ್ರಹ ನಿಯಂತ್ರಣ ಕೇಂದ್ರ ಸ್ಥಾಪನೆಯಾಗುವವರೆಗೆ ಭಾರತದಲ್ಲಿ ಇದ್ದದ್ದು ಹಾಸನದ ಉಪಗ್ರಹ ನಿಯಂತ್ರಣ ಕೇಂದ್ರ ಒಂದೇ.

ಉಪಗ್ರಹ ನಿಯಂತ್ರಣ ಕೇಂದ್ರ ಸ್ಥಾಪಿಸಲು ಇಸ್ರೋ ಹಲವಾರು ರಾಜ್ಯಗಳಲ್ಲಿ ಹಲವಾರು ಸ್ಥಳಗಳನ್ನು ಪರಿಶೀಲಿಸಿತು. ಆದರೆ ಇಸ್ರೋ ಹಾಸನವನ್ನೇ ಆಯ್ಕೆಮಾಡಿತು.

ಏಕೆಂದರೆ ಈ ಪ್ರದೇಶ ಹೆಚ್ಚು ಶಬ್ದಮಾಲಿನ್ಯವಿಲ್ಲದೆ ಪ್ರಶಾಂತವಾಗಿದೆ ಮತ್ತು ತರಂಗಗಳನ್ನು ಸ್ವೀಕರಿಸಲು ಸೂಕ್ತವಾಗಿದೆ ಎಂಬ ಕಾರಣದಿಂದ ತುಂಬಾ ದುರ್ಬಲವಾದ ತರಂಗಗಳನ್ನು ಸ್ವೀಕರಿಸಲು ಸಾಧ್ಯವಾಗಬಹುದಾದ ಕಡಿಮೆ ಅಡಚಣೆಯುಳ್ಳ ಸ್ಥಳ ಇದಾಗಿದೆ. ಈ ನಿಯಂತ್ರಣ ಕೇಂದ್ರವು ೧೭.೨ ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿದ್ದು ಕರ್ನಾಟಕ ಸರ್ಕಾರವು ಈ ಭೂಮಿಯನ್ನು ಒದಗಿಸಿದೆ.

**ಒಳವಿಭಾಗಗಳು**

ಉಪಗ್ರಹ ನಿಯಂತ್ರಣ ಕೇಂದ್ರವು ಮೂರು ವಿಭಾಗಗಳನ್ನು ಹೊಂದಿದೆ. ಅವುಗಳೆಂದರೆ

೧. ಉಪಗ್ರಹ ನಿಯಂತ್ರಣ ಕೇಂದ್ರ ೨. ಉಡಾವಣಾ ನಿಯಂತ್ರಣ ಕೇಂದ್ರ ಮತ್ತು ೩. ಭೂ ಕೇಂದ್ರ.

೨. ಉಪಗ್ರಹ ನಿಯಂತ್ರಣ ಕೇಂದ್ರ:- ಈ ಕೇಂದ್ರವು ಉಪಗ್ರಹಗಳನ್ನು ನಿಯಂತ್ರಿಸುವುದು ಮತ್ತು ಉಪಗ್ರಹಳಿಗೆ ವಿವಿಧ ರೀತಿಯ ಕೆಲಸಮಾಡುವಂತೆ ಸೂಚನೆಗಳನ್ನು ಕಳುಹಿಸುವ ಜವಾಬ್ದಾರಿಯನ್ನು ಹೊಂದಿದೆ.

೩. ಉಡಾವಣಾ ನಿಯಂತ್ರಣ ಕೇಂದ್ರ:- ಈ ಕೇಂದ್ರವು ಮುಖ್ಯವಾಗಿ ಉಪಗ್ರಹಗಳನ್ನು ಹಾರಿಸುವಾಗ ಮತ್ತು ಹಾರಿಸಿದ ಆರಂಭದ ಸಮಯದಲ್ಲಿ ಬಹಳ ಮುಖ್ಯವಾದ ಕಾರ್ಯಗಳನ್ನು ನಿರ್ವಹಿಸುತ್ತದೆ. ಈ ಕೇಂದ್ರದಲ್ಲಿ ಹಾರಿಸಿದ ಉಪಗ್ರಹ ಹೇಗೆ ಕಾರ್ಯನಿರ್ವಹಿಸುತ್ತದೆ, ಹೇಗೆ ಚಲಿಸುತ್ತದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಉಪಗ್ರಹದಲ್ಲಿ ಏನಾದರೂ ದೋಷ ಕಂಡುಬಂದರೆ ತಕ್ಷಣ ಅಪಾಯದ ಘಂಟೆ ಹೊಡೆದುಕೊಳ್ಳಲಾರಂಭಿಸುತ್ತ ತಕ್ಷಣ ಸಂಬಂಧಿಸಿದ ಅಧಿಕಾರಿಗಳು ಉಪಗ್ರಹಕ್ಕೆ ಸೂಕ್ತ ಸಂದೇಶ ರವಾನಿಸಿ ಅದನ್ನು ಸರಿಪಡಿಸುತ್ತಾರೆ.

೪. ಭೂ ಕೇಂದ್ರ:- ಏಳು ಭೂಕೇಂದ್ರಗಳಿಂದ ಸಂಯೋಜನೆಗೊಂಡ ಭೂ ಕೇಂದ್ರ ಸೌಲಭ್ಯವನ್ನು ಉಪಗ್ರಹ ನಿಯಂತ್ರಣ ಕೇಂದ್ರ ಹೊಂದಿದೆ. ಈ ಭೂ ಕೇಂದ್ರಗಳಿಗೆ ಅಂಟೆನಾಗಳು ಸಹಕರಿಸುವ ಮೂಲಕ ಉಪಗ್ರಹಗಳ ಮತ್ತು ಉಪಗ್ರಹ ನಿಯಂತ್ರಣ ಕೇಂದ್ರಗಳ ನಡುವೆ ಸಂಪರ್ಕವನ್ನು ಉಂಟುಮಾಡುತ್ತದೆ.

**ಉಪಗ್ರಹಗಳು:-**

ಹಾಸನದ ಉಪಗ್ರಹ ನಿಯಂತ್ರಣ ಈ ಕೆಳಗಿನ ಏಳು ಉಪಗ್ರಹಗಳನ್ನು ನಿಯಂತ್ರಿಸುತ್ತದೆ. ೧. ಇನ್ಸಾಟ್-೨ಇ, ೨. ಇನ್ಸಾಟ್-೩ಸಿ, ೩. ಇನ್ಸಾಟ್-೩ಎ, ೪. ಇನ್ಸಾಟ್-೩ಇ, ೫. ಇನ್ಸಾಟ್-೪ಎ, ೬ .ಕಲ್ಪನಾ-೧ ಮತ್ತು ೭. ಜಿಸ್ಯಾಟ್-೨.

**ವಿಜ್ಞಾನಿಗಳು:-**

ಸಿ.ಜಿ. ಪಾಟೇಲ್‌ರವರು ಉಪಗ್ರಹ ನಿಯಂತ್ರಣ ಕೇಂದ್ರ ಈಗಿನ ನಿರ್ದೇಶಕರಾಗಿದ್ದಾರೆ. ಇನ್ನೊಂದು ಮುಖ್ಯ ಸಂಗತಿಯೆಂದರೆ ಯಾವುದೇ ಉಪಗ್ರಹ ಹಾರಿಸುವುದಕ್ಕಿಂತ ಮುಂಚೆ ವಿಜ್ಞಾನಿಗಳ ಒಂದು ಗುಂಪು ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿಯ ದೇವಸ್ಥಾನಕ್ಕೆ ತೆರಳಿ ಉಪಗ್ರಹದ ಯಶಸ್ಸಿಗಾಗಿ ಪ್ರಾರ್ಥಿಸುತ್ತಾರೆ.

**ಹಾಲಿನ ಡೈರಿ:-**

ಹಾಲಿನ ಡೈರಿಯು ೦೧-೦೫-೧೯೮೮ರಲ್ಲಿ ಸ್ಥಾಪಿತವಾಗಿದೆ. ಚನ್ನರಾಯಪಟ್ಟಣ ಮತ್ತು ಹೊಳೇನರಸೀಪುರದಲ್ಲಿ ಹಾಲು ಶೀಥಲೀಕರಣ ಕೇಂದ್ರಗಳಿವೆ. ಹಾಸನದಲ್ಲಿ ೪೧೫ ಜನರು ಉದ್ಯೋಗಿಗಳಿದ್ದಾರೆ. ಹಾಸನ ಮಡಿಕೇರಿ, ಕೂಡಿಗೆಯನ್ನು ಒಕ್ಕೂಟವನ್ನಾಗಿ ಮಾಡಿದ್ದಾರೆ. ಹಾಲು, ಪೇಡಾ, ತುಪ್ಪ ಉತ್ಪಾದನೆ, ಮೈಸೂರುಪಾಕು, ಹಾಲಿನಪುಡಿ, ಇವುಗಳನ್ನು ಬೆಂಗಳೂರಿನಿಂದ ಆಮದು ಮಾಡಿಕೊಂಡು ಜಿಲ್ಲಾದ್ಯಂತ ವಿತರಿಸಲಾಗುತ್ತಿದೆ.

**ಗೊರೂರು ಅಣೆಕಟ್ಟು-ಹೇಮಾವತಿ ಜಲಾಶಯ:-**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೨೩ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೨೩ ಕಿ.ಮೀ



ಗೊರೂರು ಅಣೆಕಟ್ಟು ಹಾಸನದಿಂದ ಸುಮಾರು ೨೩ ಕಿ.ಮೀ. ದೂರದಲ್ಲಿದೆ. ಹಾಸನ- ಅರಕಲಗೂಡು ಮಾರ್ಗದಲ್ಲಿದೆ. ಹೇಮಾವತಿ ಜಲಾಶಯವೆಂದು ಕರೆಯುತ್ತಿದ್ದು ನೋಡಲು ನಯನ ಮನೋಹರವಾಗಿದೆ.

**ಕೈಗಾರಿಕಾ ವಲಯ**

ದೂರ ಜಿಲ್ಲೆಯಿಂದ ಲ.ಕಿ.ಮೀ

ಹಾಸನದಿಂದ ಸುಮಾರು ಲಕಿ.ಮೀ. ದೂರದಲ್ಲಿದೆ. ಹಾಸನ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಸ್ಥಳಗಳಲ್ಲಿ ಕೈಗಾರಿಕಾವಲಯವು ಒಂದು. ಲಕ್ಷಾಂತರ ಜನರಿಗೆ ಉದ್ಯೋಗವನ್ನು ಒದಗಿಸಿರುವ ಕೈಗಾರಿಕೆಗಳು ಉನ್ನತಮಟ್ಟದಲ್ಲಿ ಪ್ರಗತಿಸಾಧಿಸಿವೆ. ಇದರಲ್ಲಿ ಮುಖ್ಯವಾದವು ಹರಿಯಾಣ ಉಕ್ಕು ಕಾರ್ಖಾನೆ. ಇದರಲ್ಲಿ ಸಾವಿರಾರು ಟನ್‌ಗಳಷ್ಟು ಅದಿರಿನ್ನು ಉತ್ಪಾದನೆ ಮಾಡಲಾಗುತ್ತಿದೆ. ಹಿಮ್ಮತ್ ಸಿಂಗ್, ಗೋಗೋ ಇಂಟರ್ ನ್ಯಾಷನಲ್ ಕಾರ್ಖಾನೆಗಳು, ಬಟ್ಟೆಗಳು, ಸಿದ್ದ ಉಡುಪುಗಳ ತಯಾರಿಕೆಯನ್ನು ಸಿದ್ದಪಡಿಸುತ್ತಾರೆ. ಇದರ ಜೊತೆಗೆ ಗ್ರಾನೈಟ್, ಮೊಸಾಯಿಕ್ ಕಂಪನಿಗಳು ಇವೆ. ಉಪ್ಪಿನಕಾಯಿ ಕಾರ್ಖಾನೆಗಳು ಸಾವಿರಾರು ಜನರಿಗೆ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಉದ್ಯೋಗ ನೀಡಿ ಮಹಿಳಾ ಸಬಲೀಕರಣಕ್ಕೆ ಅವಕಾಶ ಮಾಡಿಕೊಟ್ಟು ಮಹಿಳೆ ಸ್ವತಂತ್ರವಾಗಿ ತಮ್ಮ ಜೀವನವನ್ನು ಯಶಸ್ವಿಯಾಗಿ ನಡೆಸಲು ದಾರಿಮಾಡಿಕೊಟ್ಟಿವೆ. ಅನೇಕ ಆಟೋಮೊಬೈಲ್ ಕಾರ್ಖಾನೆಗಳನ್ನು ಇಲ್ಲಿ ಕಾಣಬಹುದಾಗಿದೆ.

**ಮೊಸಳೆಗ್ರಾಮ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೧೬ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೬ ಕಿ.ಮೀ



ಈ ಸ್ಥಳದಲ್ಲಿ "ಚೆನ್ನಕೇಶವ" ಮತ್ತು "ನಾಗೇಶ್ವರ" ದೇವಸ್ಥಾನಗಳು ಅಕ್ಕಪಕ್ಕದಲ್ಲೇ ನಿರ್ಮಾಣಗೊಂಡಿದ್ದು ಹೊಯ್ಸಳ ವಾಸ್ತುಶೈಲಿಯನ್ನು ನೆನಪುಮಾಡಿಕೊಡುತ್ತವೆ. ಆದರೆ ಈ ದೇವಸ್ಥಾನಗಳು ನಿರ್ಮಾಣಗೊಂಡ ಸಮಯ ಮತ್ತು ಯಾವ ರಾಜನ ಆಳ್ವಿಕೆಯಲ್ಲಿ ಎಂದು ಈ ಪ್ರಶ್ನೆಗಳಲ್ಲಿಗೆ ಉತ್ತರಗಳು ಲಭ್ಯವಿರುವುದಿಲ್ಲ. ಆದರೆ ಈ ದೇವಸ್ಥಾನಗಳ ನಿರ್ಮಾಣ ಶೈಲಿ ಮತ್ತು ಆಕಾರ ಪ್ರಕೃತಿಯನ್ನು ಅವಲೋಕಿಸಿದಾಗ ಕಂಡುಬರುವುದು ಅಥವ ಊಹಿಸಬಹುದಾದ ಸಮಯವೆಂದರೇ ಸುಮಾರು ೧೩ನೇ ಶತಮಾನ. ಈ ೧೩ನೇ ಶತಮಾನದಲ್ಲಿ ಹೊಯ್ಸಳ ಶೈಲಿಯ ರಚನೆಗಳು / ವಾಸ್ತುಗಳು ಹಾಸನ ಜಿಲ್ಲೆಯಲ್ಲಿ ಹೇರಳವಾಗಿ ಕಂಡು ಬರುವುದು ಮತ್ತೊಂದು ವಿಶೇಷ.

**ದೊಡ್ಡಗದ್ದವಳ್ಳಿ – ಶ್ರೀ ಲಕ್ಷ್ಮೀದೇವಸ್ಥಾನ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೧೫ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೫ ಕಿ.ಮೀ



ಈ ಗ್ರಾಮವು ಹಾಸನ-ಬೇಲೂರು ಮಾರ್ಗದಲ್ಲಿ ಸರಿ ಸುಮಾರು ೧೫ ಕಿಲೋಮೀಟರ್ ದೂರದಲ್ಲಿ ಇದೆ. ಈ ದೇವಸ್ಥಾನದ ಗೋಪುರಗಳು ನೋಡುಗರನ್ನು ದೂರದಿಂದಲ್ಲೇ ಆಕರ್ಷಿಸುತ್ತವೆ. ಈ ಸ್ಥಳ ಆರಾಧ್ಯದೇವತೆ " ಶ್ರೀಲಕ್ಷ್ಮಿ ಅಮ್ಮನವರು", ಈ ಭಾಗದ ಈಶಾನ್ಯದಲ್ಲಿ ಹೊಯ್ಸಳ ಕಾಲದ ನಿರ್ಮಾಣದ "ಶ್ರೀ ವೀರಭದ್ರ" ದೇವಸ್ಥಾನವೂ ಕಂಡು ಬರುತ್ತದೆ ಮಾತ್ರವಲ್ಲದೆ ಅತ್ಯಂತ ಆಕರ್ಷಕವೂ ಹೌದು. ಇಲ್ಲಿ ದೊರಕಿರುವ ಶಾಸನಗಳು ಹಾಗೂ ಇನ್ನೀತರೆ ಆಧಾರಗಳ ಮೇಲೆ ಇದರ ನಿರ್ಮಾಣವು ಚಾಲುಕ್ಯರು ಅಥವ ಹೊಯ್ಸಳ ಆರಂಭ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿದೆ ಎಂದು ಕಂಡು ಬರುತ್ತದೆ. ಇದರ ಆಕಾರ, ಆಕೃತಿ, ಗೋಡೆಗಳು, ಗೋಪುರಗಳಲ್ಲಿ ಚಿತ್ರಣಗೊಂಡಿರುವ ಘಟನೆಗಳಿಂದ ತಿಳಿದುಬರುವ ಅಂಶವೆಂದರೆ ಕ್ರಿ.ಶ. ೧೧೧೩ರಲ್ಲಿ ವಿಷ್ಣುವರ್ಧನನ ರಾಜಾಳ್ವಿಕೆಯಲ್ಲಿ ನಿರ್ಮಾಗೊಂಡಿದೆ ಎಂದು ಖಚಿತಪಡಿಸಿಕೊಳ್ಳಬಹುದು.

## ಬೇಲೂರು ತಾಲೂಕಿನ ಪ್ರಮುಖ ಸ್ಥಳಗಳು

**ಚನ್ನಕೇಶವ ದೇವಾಲಯ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೮ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೦ ಕಿ.ಮೀ



ಇತಿಹಾಸ ಪ್ರಸಿದ್ದವಾದ ಶಿಲೆಯಲ್ಲಿ ಕಲೆಯರಳಿರುವ, ಶಿಲ್ಪಕಲೆಯ ತವರೂರು ಎಂದೇ ಪ್ರಸಿದ್ದವಾಗಿರುವ ಇಲ್ಲಿ ಶ್ರೀ ಚನ್ನಕೇಶವನ ದೇವಾಲಯವಿದ್ದು, ಹೊಯ್ಸಳರ ಶಿಲ್ಪಕಲೆಗೆ ಹೆಸರುವಾಸಿಯಾಗಿದೆ. ಈ ದೇವಾಲಯವನ್ನು ೩೧/೨ ಅಡಿ ಎತ್ತರದ ನಕ್ಷತ್ರಾಕಾರದ ಪೀಠದ ಮೇಲೆ ನಿರ್ಮಿತವಾಗಿದೆ. ನವರಂಗದಲ್ಲಿರುವ ಮದನಿಕೆಯರ ನಾಟ್ಯಭಂಗಿಗಳು ನಯನ ಮನೋಹರವಾಗಿದೆ ಇಂದಿಗೂ ಸಹ ಈ ಹೊಯ್ಸಳರ ದೇವಾಲಯದಲ್ಲಿ ನಿತ್ಯಪೂಜೆ ಹಾಗೂ ವರ್ಷಕ್ಕೊಮ್ಮೆ ರಥೋತ್ಸವವು ನಡೆಯುತ್ತದೆ.

ನಕ್ಷತ್ರಾಕಾರದ ೩೨ಕೋನಗಳ ಶ್ರೀಚಕ್ರ ರೂಪದ ವೇದಿಕೆಯ ಮೇಲೆ ರಚಿತವಾಗಿದೆ. ಪೀಠದ ಪಟ್ಟಿಕೆಗಳಲ್ಲಿರುವ ಗಜಸಾಲು, ಯೋಧರಸಾಲು, ಕೀರ್ತಿಮುಖಸಾಲು, ಲತಾ ಪಟ್ಟಿಕೆಗಳಲ್ಲಿ ಸುಮಾರು ೧೦ ಸಾವಿರ ಸಣ್ಣವಿಗ್ರಹಗಳು ಇವೆ.

**ಹಳೆಬೀಡು :-**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೧ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೧೭ ಕಿ.ಮೀ



ಇತಿಹಾಸ ಪ್ರಸಿದ್ಧವಾದ ಹಳೆಬೀಡು ಈ ಹಿಂದೆ ಹೊಯ್ಸಳರ ರಾಜಧಾನಿಯಾಗಿದ್ದು, ಅಪ್ರತಿಮ ಶಿಲ್ಪಕಲೆಗೆ ಸಾಕ್ಷಿಯಾಗಿದೆ. ಇದನ್ನು ಸಹ ನಕ್ಷತ್ರಾಕಾರದ ಪೀಠದ ಮೇಲೆ ನಿರ್ಮಿತವಾಗಿದೆ. ಇದರಲ್ಲಿ ವಿವಿಧ ಶಿಲ್ಪ ಕಲಾಕೃತಿಗಳ ಜೊತೆಗೆ ಹೊಯ್ಸಳ ಅರಸರ ಜೀವನ ವೈವಿಧ್ಯವನ್ನು ಸಹ ನಿರ್ಮಿಸಲಾಗಿದೆ.

ಈ ದೇವಾಲಯದ ಆವರಣದಲ್ಲಿರುವ ವಿಗ್ರಹಗಳು, ಪ್ರತಿಮೆಗಳು, ಹಾಗೂ ಭೂ ಉತ್ಸವದ ಕಾಲದಲ್ಲಿ ದೊರೆತ ಅವಶೇಷಗಳನ್ನು ಸೇರಿದಂತೆ, "ವಸ್ತು ಸಂಗ್ರಹಾಲಯವನ್ನು" ನಿರ್ಮಿಸಿದ್ದು ಪ್ರತಿದಿನ ಬೆಳಿಗ್ಗೆ ೧೦ ರಿಂದ ಸಂಜೆ ೫ರವರೆಗೆ ತೆರೆದಿದ್ದು, ಶುಕ್ರವಾರ ಈ ವಸ್ತು ಸಂಗ್ರಹಾಲಯಕ್ಕೆ ರಜೆ ಇರುತ್ತದೆ.

**ಪುಷ್ಪಗಿರಿ ಬೆಟ್ಟ**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೨೭ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೩ ಕಿ.ಮೀ



ಹಳೇಬೀಡು – ಹಗರೆ ಮಾರ್ಗದಲ್ಲಿರುವ ಇದು ಚಿಕ್ಕ ಬೆಟ್ಟವಾಗಿದೆ. ಇಲ್ಲಿ ಮಲ್ಲಿಕಾರ್ಜುನ ದೇವಾಲಯವಿದೆ. ಇಲ್ಲಿ ಶ್ರೀಶ್ರೀಶ್ರೀ ಸೋಮಶೇಖರ ಸ್ವಾಮೀಜಿಯವರು ನೆಲೆಸಿದ್ದು, ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾಭ್ಯಾಸದ ಸೌಲಭ್ಯವನ್ನು ಒದಗಿಸಿರುತ್ತಾರೆ. ಇಲ್ಲಿಗೆ ಬರುವ ಭಕ್ತಾದಿಗಳಿಗೆ ಪ್ರತಿದಿನ ಊಟ, ಉಪಹಾರಗಳ ವ್ಯವಸ್ಥೆ ಇರುತ್ತದೆ. ಇಲ್ಲಿ ಪ್ರತಿ "ಹುಣ್ಣಿಮೆ"ಯಂದು ತಾಜ್ ನೆಡೆಯುವ ಕಾರ್ಯಕ್ರಮದಲ್ಲಿ ವಿಚಾರ ಸಂಕಿರಣ, ಉಪನ್ಯಾಸ, ಚಿಂತನ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸ್ವಾಮೀಜಿಯವರಿಂದ, ವಿಶೇಷ ವಿಚಾರ ಮಂಡನೆ ಇರುತ್ತದೆ. ಇದೊಂದು ವಿದ್ಯಾ ಕೇಂದ್ರ, ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯುತ್ತಿದೆ. ಬೆಟ್ಟದ ಮೇಲಿನಿಂದ ಸುತ್ತ ಮುತ್ತಲಿನ ಪ್ರಕೃತಿ ನೋಟವು ರಮಣೀಯವಾಗಿದೆ.

**ಬೆಣ್ಣೆಬೆಟ್ಟ :**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೩೨ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೧ ಕಿ.ಮೀ



ಬೇಲೂರು ತಾ. ಹಳೇಬೀಡಿನ ದೃಶ್ಯದಲ್ಲಿರುವ ಈ ಬೆಣ್ಣೆ ಬೆಟ್ಟದ ಮೇಲೆ ಆಂಜನೆಯ ದೇವಾಲಯವಿದೆ. ಬೆಟ್ಟದ ಮೇಲಿನಿಂದ ಸುತ್ತಮುತ್ತಲಿನ ಪ್ರಕೃತಿ ನೋಟ ರಮ್ಯವಾಗಿದೆ. ಚಿಣ್ಣರಿಗೆ ಬೆಟ್ಟ ಏರುವುದರ ಅರಿವು ಹಾಗೂ ಅನುಭವವು ಎಲ್ಲಾದವನ್ನು ನೀಡುತ್ತದೆ. ಹಳೇಬೀಡಿನಿಂದ ನಡೆದು ಹೋಗಬಹುದು. ಹಳೆಬೀಡು – ಹಗರೆ ಮಾರ್ಗದಲ್ಲಿ ಬತ್ತಿಹಳ್ಳಿಯ ಕಿರಿಯ ಪ್ರಾಥಮಿಕ ಶಾಲೆಯ ಮುಂದಿ ನಿಂದ ರಸ್ತೆ ಸಾಗುತ್ತದೆ.

**ಯಗಚಿ ಜಲಾಶಯ – ಬೇಲೂರು**

**ದೂರ ಎಷ್ಟು?**

ಜಿಲ್ಲಾ ಕೇಂದ್ರದಿಂದ : ೪೦ ಕಿ.ಮೀ

ತಾಲ್ಲೂಕು ಕೇಂದ್ರದಿಂದ : ೦೨ ಕಿ.ಮೀ



ಜಿಲ್ಲಾ ಕೇಂದ್ರದಿಂದ ೪೦ ಕಿ.ಮೀ ಮಾರ್ಗ ಬೇಲೂರು -ಚಿಕ್ಕಮಗಳೂರು ಯಗಚಿ ಜಲಾಶಯವು ೩.೬ ಟಿ.ಎಂ.ಸಿ ಸಾಮರ್ಥ್ಯವನ್ನು ಹೊಂದಿದ್ದು, ೩೬ ಅಡಿಗಳಷ್ಟು ಎತ್ತರವಿದೆ . ೧೦೦ಕಿ.ಮೀ ಉದ್ದದ ಎಡದಂಡೆ ಕಾಲುವೆಯನ್ನು ಹೊಂದಿದ್ದು, ಸುಮಾರು, ೫೭,೦೦೦/- ಎಕರೆಗೆ ನೀರುಣಿಸುತ್ತದೆ.

ಬೇಲೂರು ಹಾಗೂ ಚಿಕ್ಕಮಗಳೂರು ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಪ್ರಸ್ತುತ ಅರಸೀಕೆರೆ ತಾ.ಗೆ ನೀರನ್ನು ಒದಗಿಸುವ ಕಾಮಗಾರಿಯು ಪ್ರಗತಿಯಲ್ಲಿದೆ.

ಈ ಜಲಾಶಯವು ೫ ಕ್ರಸ್ಟ್‌ಗೇಟ್‌ಗಳನ್ನು ಹೊಂದಿದೆ. ಇಲ್ಲಿ ರಾಜ್ಯ ಪ್ರಾವಾಸೋದ್ಯಮ ಇಲಾಖೆಯಿಂದ ಪಂಚತಾರಾ ಹೋಟೆಲ್‌ಗಳ ನಿರ್ಮಾಣವಾಗುತ್ತಿದೆ. ಹಾಗೂ ಬೃಂದಾವನ (ಪಾರ್ಕ್) ನಿರ್ಮಿಸುವ ಯೋಜನೆಯೂ ಸಹ ಇರುತ್ತದೆ.

**ಹಲ್ಮಿಡಿ ಬೇಲೂರು ತಾ. ಮಾರ್ಗ – ಬೇಲೂರು – ಅಂಬಳೆ – ಚಿಕ್ಕಮಗಳೂರು.**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೫೮ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೨೦ ಕಿ.ಮೀ'



ಹಲ್ಮಿಡಿಯು ಕನ್ನಡದ ಮೊದಲ ಲಿಖಿತ ದಾಖಲೆಯು ದೊರೆತ ಸ್ಥಳ ಹಲ್ಮಿಡಿ ಶಾಸನವು ಶಿಲಾ ಶಾಸನದ ರೂಪದಲ್ಲಿದ್ದು, ಇದರ ಮೂಲಕೃತಿಯು ಬೆಂಗಳೂರಿನ ಹೈಕೋರ್ಟಿನ ಹಿಂಭಾಗದಲ್ಲಿರುವ ಸರ್ಕಾರೀ ವಸ್ತು ಸಂಗ್ರಹಾಲಯದಲ್ಲಿದೆ. ಹಲ್ಮಿಡಿಯಲ್ಲಿ ಇದರ ಪ್ರತಿಕೃತಿ ಮಂಟಪವನ್ನು ರಚಿಸಲಾಗಿದೆ.

೧. ಪ್ರತಿಕೃತಿ ಮಂಟಪ ರಚನೆಯ ಸಂಕಲ್ಪ, ಶ್ರೀ ಮದನ್ ಗೌಡ ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಾಸನ.

೨. ಸಹಕಾರ :- ಕೇಂದ್ರ ಪುರಾತತ್ವ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

೩. ಪ್ರತಿಕೃತಿ ಮಂಟಪ ವಿನ್ಯಾಸ ಡಾ. ಶ್ರೀವತ್ಸ ಎಸ್. ವಟಿ. ಬೇಲೂರು.

**ಗಾಳಿಯಂತ್ರಗಳು**

**ದೂರ ಎಷ್ಟು?**
ಜಿಲ್ಲಾ ಕೇಂದ್ರದಿಂದ : ೧೬ ಕಿ.ಮೀ
ತಾಲ್ಲೂಕು ಕೇಂದ್ರದಿಂದ : ೦೮ ಕಿ.ಮೀ



ಜಿಲ್ಲೆಯಿಂದ ೧೬ ಕಿ.ಮೀ. ದೂರದಲ್ಲಿರುವ ಅಡಗೂರು ರಸ್ತೆಯಲ್ಲಿ ಬೆಟ್ಟದ ಮೇಲೆ ಗಾಳಿ ಯಂತ್ರಗಳನ್ನು ನಿರ್ಮಿಸಲಾಗಿದೆ. ಆಶಾಡಮಾಸ ಮತ್ತು ಮಳೆಗಾಲದಲ್ಲಿ ಹೆಚ್ಚಿನ ವಿದ್ಯತ್ ಉತ್ಪಾದನೆ ೨೦೦೮-೦೯ನೇ ಸಾಲಿನಲ್ಲಿ ಸ್ಥಾಪಿತಗೊಂಡಿದೆ. ಖಾಸಗಿ ಕಂಪನಿಯೊಂದು ಈ ಗಾಳಿಯಂತ್ರಗಳನ್ನು ಸ್ಥಾಪಿಸಿದೆ.

**ರೆಬೆಲ್ಲೋ ಸ್ಟೀಲ್ ಇಂಡಸ್ಟ್ರೀಸ್, ಬೇಲೂರು**



* ಬೇಲೂರಿನ ಪಂಪ್‌ಹೌಸ್ ರಸ್ತೆಯಲ್ಲಿರುವ ಈ ಸಣ್ಣ ಕೈಗಾರಿಕೆಯಲ್ಲಿ ಸ್ಟೀಲಿನ ಹಂಡೆ, ದಬರಿ, ಹಾಲಿನ ಕ್ಯಾನ್ ಕೊಡ ಹಾಗೂ ಮಜ್ಜಿಗೆ ಹಂಡೆಗಳನ್ನು ತಯಾರಿಸಲಾಗುತ್ತದೆ.

ಜೋಧ್‌ಪುರ್, ದೆಹಲಿ, ಅಹಮದಾಬಾದ್ ಗಳಿಂದ ಸ್ಟಿಲ್ ೩೩ ಪಾಟಾಗಳನ್ನು ತರಿಸಿಕೊಂಡು ಕತ್ತರಿಸಿ ಬೇಕಾದ ಆಕಾರವನ್ನು ನೀಡಲಾಗುತ್ತದೆ. ನಂತರ ಮೈಸೂರಿನಿಂದ ತರಿಸುವ ೨-೩ ತರಹದ ವಿಶೇಷ ಸೋಪುಗಳಿಂದ ತೊಳೆದು ನಂತರ ೩ ಹಂತಗಳಲ್ಲಿ ಹೊಳಪನ್ನು ನೀಡಲಾಗುತ್ತದೆ.

ಇಲ್ಲಿನ ಪಾತ್ರೆಗಳು ಮಡಿಕೇರಿ, ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು, ಹಾಸನ ಜಿಲ್ಲೆಗೆ ಮಾತ್ರವಲ್ಲದೆ, ನೆರೆಯ ಗೋವಾ ರಾಜ್ಯಕ್ಕೂ ಸಹ ರವಾನೆಯಾಗುತ್ತದೆ.

ರಾಜಕೀಯವಾಗಿ ಸನ್ಮಾನ್ಯ ಹೆಚ್.ಡಿ. ದೇವೇಗೌಡರನ್ನು ದೇಶದ ಪ್ರಧಾನ ಮಂತ್ರಿಯನ್ನಾಗಿ ನೀಡುವಲ್ಲಿ ಯಶಸ್ವಿಯಾಗಿದೆ. ಅಂತೆಯೇ ಸಾಹಿತ್ಯ ಕ್ಷೇತ್ರದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಾಸನ್ ರಾಮ್‌ರಾವ್, ಹೆಚ್.ಎ. ಲಕ್ಕಪ್ಪಗೌಡ, ನರಸಿಂಹರಾಯ, ಎಸ್.ಎಲ್. ಭೈರಪ್ಪ, ಭಾನು ಮುಸ್ತಾಕ್, ಎಸ್.ಕೆ.ಕರೀಂಖಾನ್, ಅ.ನ.ಕೃ., ಕಿ.ರಂ. ನಾಗರಾಜು, ಡಾ|| ವಿಜಯದಬ್ಬೆ, ಮುಂತಾದ ಸಾಹಿತಿಗಳನ್ನು ಕೊಟ್ಟ ಜಿಲ್ಲೆ, ಹಾಸನ ವಾಗಿದೆ. ಕ್ರೀಡೆ, ಜಾನಪದ, ಕೋಲಾಟ, ವೀರಗಾಸೆ, ಬಯಲು ನಾಟಕಗಳನ್ನು ಉಳಿಸಿ ಬೆಳೆಸಿಕೊಂಡು ಬಂದು ಅಪಾರ ಕಲಾವಿದರಿಗೆ ತಾಣವಾಗಿದೆ. ಹಾಸನ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೨೦೦೧ರ ಜನಗಣತಿಯ ಪ್ರಕಾರ ೭೮.೬೫% ಆಗಿದೆ.

ಒಟ್ಟಾರೆ ಭೌಗೋಳಿಕವಾಗಿ ಅತ್ಯಂತ ಸುರಕ್ಷಿತ ಸ್ಥಳದಲ್ಲಿರುವ ಹಾಸನವು ಕೃಷಿ ಪ್ರಧಾನವಾಗಿದ್ದು, ಕೈಗಾರಿಕೆ, ಗುಡಿ ಕೈಗಾರಿಕೆ, ವಾಣಿಜ್ಯ ಕ್ಷೇತ್ರಗಳಲ್ಲಿಯೂ ತೀವ್ರತರವಾಗಿ ಬೆಳೆಯುತ್ತಿದ್ದು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣಕ್ಕಾಗಿ ಸಾಕಷ್ಟು ಪರಿಣಾಮಕಾರಿಯಾದ ಯೋಜನೆಗಳನ್ನು ಸರ್ವ ಶಿಕ್ಷಣ ಅಭಿಯಾನದಡಿ ಯಶಸ್ವಿಯನ್ನು ಕಂಡ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿಹಾಸನ ಸಾಲಗಾಮೆ ಮಾರ್ಗದಲ್ಲಿ ಆಕಾಶವಾಣಿ ಕೇಂದ್ರವು ಇರುತ್ತದೆ.

## ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು

**ಸಮಸ್ಯೆ ಇದ್ದಲ್ಲಿ ತಾಲ್ಲೂಕು/ ಜಿಲ್ಲಾ ಕಚೇರಿಗಳನ್ನು ಸಂಪರ್ಕಿಸುವುದು ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.**

* ಅಭಿವೃದ್ಧಿ :- ೯೪೪೮೯೯೯೩೬೧

* ಉಪನಿರ್ದೇಶಕರು ಆಡಳಿತ :-೯೪೪೮೯೯೯೩೪೨

* ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು :- ೯೪೪೮೯೯೯೩೯೮

೧. ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರಕಲಗೂಡು ೯೪೮೦೬೯೫೨೩೧

೨. ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರಸೀಕೆರೆ ೯೪೮೦೬೯೫೨೩೨

೩. ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಲೂರು ೯೪೮೦೬೯೫೨೩೦

೪. ಕ್ಷೇತ್ರ ಶಿಕ್ಷಣಾಧಿಕಾರಿಗಳು ಬೇಲೂರು ೯೪೮೦೬೯೫೨೩೩

೫. ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನರಾಯಪಟ್ಟಣ ೯೪೮೦೬೯೫೨೩೪

೬. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಸನ ೯೪೮೦೬೯೫೨೩೫

೭. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಳೆನರಸೀಪುರ ೯೪೮೦೬೯೫೨೩೬

೮. ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಕಲೇಶಪುರ ೯೪೮೦೬೯೫೨೩೭

**ಹಾಸನ ಜಿಲ್ಲೆಯ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು**

೧. ಅರಕಲಗೂಡು :- ೯೪೮೦೬೯೫೨೩೯

೨. ಅರಸೀಕೆರೆ :- ೯೪೮೦೬೯೫೨೪೦

೩. ಆಲೂರು :- ೯೪೮೦೬೯೫೨೩೮

೪. ಬೇಲೂರು : – ೯೪೮೦೬೯೫೨೪೧

೫. ಚನ್ನರಾಯಪಟ್ಟಣ :- ೯೪೮೦೬೯೫೨೪೨

೬. ಹಾಸನ :- ೯೪೮೦೬೯೫೨೪೩

೭. ಹೊಳೆನರಸೀಪುರ :- ೯೪೮೦೬೯೫೨೪೪

೮. ಸಕಲೇಶಪುರ :- ೯೪೮೦೬೯೫೨೪೫